ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 6 ಫೆಬ್ರವರಿ 6, 1983 ಬೆಲೆ 60 ಪೈಸೆ

ದೇಶದ ರಕ್ಷಣೆಗೆ ಕಾರ್ಮಿಕರು ಮುಂದಾಗಿರಿ

—ಕಾಂ. ಬಿ. ಟಿ. ರಣದಿವೆ

"ಅಮೇರಿಕದ ಸಾಮ್ರಾಜ್ಯಶಾಹಿಗಳ ಯುದ್ಧದಿಂದ ದೇಶವನ್ನು ರಕ್ಷಿಸಿರಿ, ಟಾಟಾ-ಬಿರ್ಲಾರ ಶೋಷಣೆಯಿಂದ ದೇಶ ಉಳಿಸಿರಿ, ದೇಶವನ್ನು ಛಿದ್ರ-ವಿಛಿದ್ರಗೊಳಿಸುವ ಇಂದಿರಾ ಗಾಂಧಿಯ ಆಡಳಿತೆಯಿಂದ ದೇಶವನ್ನು ಉಳಿಸಿರಿ. ಸಾಮ್ರಾಜ್ಯಶಾಹಿಗಳ ಯುದ್ಧದ ಪ್ರಚೋದನೆಯನ್ನು ಎದುರಿಸಿ ದೇಶದ ಸಾರ್ವಭೌಮತ್ವವನ್ನು ರಕ್ಷಿಸುವ ಭೀಮಬಲ ದುಡಿಯುವ ಕಾರ್ಮಿಕ ವರ್ಗ ಒಂದಕ್ಕೇ ಸೇರಿದೆ. ಕಾರ್ಮಿಕರು ತಮ್ಮ ಐಕ್ಯತೆ ಕಾಪಾಡಿಕೊಂಡು ಕಾರ್ಯಪ್ರವೃತ್ತರಾಗಬೇಕು. ಮುನ್ನುಗ್ಗಬೇಕು" ಎಂದು ಕರೆ ಕೊಟ್ಟವರು ಸಿ.ಐ.ಟಿ.ಯು. ಅಧ್ಯಕ್ಷರಾದ ಕಾಂ. ಬಿ. ಟಿ. ರಣದಿವೆಯವರು ತಾರೀಕು 21 ರಿಂದ 23ರ ವರೆಗೆ ಕಾಂ. ದಿನೇನ್ ಸ್ಮರಣ ಭವನದಲ್ಲಿ (ಪ. ಬಂಗಾಲದ ಹೂಗ್ಲಿ ಜಿಲ್ಲೆ) ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯ ಮುಕ್ತಾಯದ ಅಂಗವಾಗಿ ಹಿಂದ್ ಮೋಟರ್ ನಗರದಲ್ಲಿ ನೆರೆದಿದ್ದ ಪ್ರಚಂಡ ಜನಸ್ತೋಮವನ್ನುದ್ದೇಶಿಸಿ ಸಾರ್ವಜನಿಕ ಸಭೆಯಲ್ಲಿ ಅವರು ಭಾಷಣ ಮಾಡುತ್ತಿದ್ದರು. ಹಿಂದೂಸ್ತಾನ್ ಮೋಟಾರ್ ಕಾರ್ಖಾನೆಯ ಕಾರ್ಮಿಕರು ಸ್ವಂತ ಹಣ ಸಂಗ್ರಹಿಸಿ ರೂ. 3 ಲಕ್ಷಕ್ಕೂ ಹೆಚ್ಚು ವೆಚ್ಚದ ಭವ್ಯ ಕಟ್ಟಡ ಕಟ್ಟಿ, ಜನಪ್ರಿಯ ಮಾರ್ಕ್ಸ್‌ವಾದಿ ಮುಖಂಡರಾದ ಕಾಂ. ದಿನೇನ್ ಭಟ್ಟಾಚಾರ್ಯರ ಸ್ಮರಣಾರ್ಥ "ದಿನೇನ್ ಸ್ಮೃತಿ ಭವನ" ವೆಂದು ನಾಮಕರಣ ಮಾಡಿ ತಾ|| 21 ರಂದೇ ಕಾಂ. ಬಿ. ಟಿ. ರಣದಿವೆಯವರಿಂದ ಕಟ್ಟಡದ ಉದ್ಘಾಟನೆ ನೆರವೇರಿಸಿ ಸಿ. ಐ. ಟಿ. ಯು ಜನರಲ್ ಕೌನ್ಸಿಲ್ ಸಭೆಗೆ ಹೆಮ್ಮೆಯಿಂದ ಅವಕಾಶ ಮಾಡಿಕೊಟ್ಟಿದ್ದರು.

ಕೇಂದ್ರ ಸರಕಾರದಲ್ಲಿ ಸಂಪೂರ್ಣ ಅಧಿಕಾರ ಕೇಂದ್ರೀಕೃತವಾಗಿದೆ. ಪಶ್ಚಿಮ ಬಂಗಾಲ ಸರಕಾರಕ್ಕೆ ಪೂರ್ಣ ಅಧಿಕಾರ ಇಲ್ಲ. ರಾಜ್ಯ ಸರಕಾರಗಳಿಗೆ ಹೆಚ್ಚಿನ ಅಧಿಕಾರ ಅಗತ್ಯ. ಅದಿಲ್ಲದಿದ್ದರೆ ಬಂಡವಾಳಶಾಹಿ ರಾಜ್ಯದ ವಿರುದ್ಧ ಹೋರಾಟವನ್ನು ಬಹು ದೀರ್ಘಕಾಲ ನಡೆಸಬೇಕಾಗುತ್ತದೆಂದು ಕಾಂ. ಬಿ. ಟಿ ಆರ್. ಹೇಳಿದರು.

ಕಳೆದ 35 ವರ್ಷಗಳ ಕಾಂಗ್ರೆಸ್ ಆಡಳಿತೆಯಲ್ಲಿ ಟಾಟಾ-ಬಿರ್ಲಾರಂತ ಗುತ್ತೇದಾರಿ ಬಂಡವಾಳದಾರರ ಬಂಡವಾಳ ಮತ್ತು ಲಾಭ ಹೆಚ್ಚಾಗುತ್ತಿದ್ದಂತೆಯೇ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಹೋರಾಡುವಾಗ ಅವರ ಮೇಲೆ ದಬ್ಬಾಳಿಕೆ ತೀವ್ರಗೊಳ್ಳುತ್ತಿದೆ, ಅವರನ್ನು ಜೈಲಿಗೆ ತಳ್ಳಲಾಗುತ್ತಿದೆ. ಇಂಥ ನೀತಿಯ ವಿರುದ್ಧ ಹೋರಾಡಬೇಕು. ಆ ಹೋರಾಟ ಯಶಸ್ವಿಯಾಗಬೇಕಾದರೆ ರೈತ-ಕಾರ್ಮಿಕರ ಐಕ್ಯತೆ ಅಗತ್ಯವೆಂದೂ, ಐಕ್ಯತೆ ಮತ್ತು ಹೋರಾಟವೇ ಸಿ. ಐ. ಟಿ. ಯು. ವಿನ ಮೂಲ ಘೋಷಣೆಯಾಗಿದ್ದು, ಭದ್ರವಾದ ಐಕ್ಯತೆ ಸಾಧಿಸಿ ಹೋರಾಡಬೇಕೆಂದು ಕಾಂ. ರಣದಿವೆ ಕರೆಯಿತ್ತರು.

ಗುಜರಾತ್, ಬರೋಡ, ಬಿಹಾರ, ಕೇರಳಗಳಲ್ಲೆಲ್ಲ ಜಾತೀಯ ದಂಗೆಗಳು ನಡೆಯುತ್ತಿವೆ. ಅಸ್ಸಾಂನಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ಗೊಂದಲವೆಬ್ಬಿಸುತ್ತಲೇ ಇದ್ದಾರೆ. ಪಂಜಾಬಿನಲ್ಲಿ ಖಲಿಸ್ತಾನ ಚಳುವಳಿ ನಡೆದಿದೆ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕುತಂತ್ರದಿಂದ ನಮ್ಮ ದೇಶದಲ್ಲಿ ಈ ರೀತಿ ಛಿದ್ರಕಾರಿ ಶಕ್ತಿಗಳು ಜನರಲ್ಲಿ ಭಿನ್ನಾಭಿಪ್ರಾಯ, ಜಗಳ ಉಂಟುಮಾಡಿ, ಶಾಂತಿಯನ್ನು ಕದಡುತ್ತಿರುವಾಗ, ಇಂಥ ಶಕ್ತಿಗಳನ್ನೆಲ್ಲ ನಾಶಮಾಡಲು ಇಂದಿರಾ ಗಾಂಧಿ ಏನೂ ಕ್ರಮಕೈಗೊಂಡಿಲ್ಲ. ಅದರ ಬದಲಾಗಿ ತಾನೇ ಸ್ವತಃ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯನ್ನು ಸೋಲಿಸುವ ಉದ್ದೇಶದಿಂದ ತ್ರಿಪುರದಲ್ಲಿ ತ್ರಿಪುರ ಉಪಜಾತಿ ಸಮಿತಿ, ಅಮರ ಬಂಗಾಲಿಯಂತ ಅಮೇರಿಕದ ಏಜಂಟರ, ಛಿದ್ರಕಾರಿ ಶಕ್ತಿಗಳ ಜೊತೆ ಸೇರಿಕೊಂಡಿದ್ದಾರೆ. ಇಂದಿರಾ ಗಾಂಧಿಯ ಕಾಂಗ್ರೆಸ್ ಪಕ್ಷ ಅಂತರಿಕ ಜಗಳದಿಂದ ಚಕ್ಕೆಚೂರಾಗಿ ಹೋಗಿದೆ. ಅದ್ದರಿಂದಲೇ ಜಾತೀಯ, ಮತೀಯ ಶಕ್ತಿಗಳೊಡನೆ ಒಪ್ಪಂದ ಮಾಡಿಕೊಳ್ಳುತ್ತಿದೆ. ತ್ರಿಪುರ, ಆಂಧ್ರ, ಕರ್ನಾಟಕಗಳಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಅಲ್ಲಿಯ ಜನ ಸೋಲಿಸಿದ್ದಾರೆ. ಮುಂದಿನ ತಿಂಗಳು ನಡೆಯುವ ಅಸ್ಸಾಂ, ಮೇಘಾಲಯ, ದಿಲ್ಲಿ ಚುನಾವಣೆಗಳಲ್ಲೂ ಇಂದಿರಾ ಪಕ್ಷ ಸೋಲುವುದರಲ್ಲಿ ಸಂಶಯವಿಲ್ಲವೆಂಬ ಭವಿಷ್ಯವನ್ನೂ ಬಿ. ಟಿ. ಆರ್. ನುಡಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಪ. ಬಂಗಾಲ ಸರಕಾರಕ್ಕೆ ಕೇಂದ್ರ ಸರಕಾರ, ಹಾಗೆಯೇ ಇಂದಿರಾ ಕಾಂಗ್ರೆಸ್ ಅನೇಕ ಅಡ್ಡಿ ಆತಂಕಗಳನ್ನೊಡ್ಡುತ್ತಿವೆ. ಕೇಂದ್ರದ ಅರ್ಥಿಕ ಮಂತ್ರಿ ಪ್ರಣಬ್ ಮುಖರ್ಜಿಯವರು ಪ. ಬಂಗಾಲದ ಮೇಲೆ ಕಣ್ಣಿಟ್ಟಿದ್ದಾರೆ. ಪ. ಬಂಗಾಲದ ಸರಕಾರವನ್ನು ರಕ್ಷಿಸುವುದು ಇಡೀ ಕಾರ್ಮಿಕ ವರ್ಗದ ಕರ್ತವ್ಯವೆಂದ ಕಾಂ. ರಣದಿವೆಯವರು ಕಾರ್ಮಿಕ ವರ್ಗದ ಜವಾಬ್ದಾರಿಯ ನೆನಪು ಮಾಡಿಕೊಟ್ಟರು.

ಸಿ. ಐ. ಟಿ. ಯು. ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಪಿ. ರಾಮಮೂರ್ತಿಯವರು ಭಾಷಣ ಮಾಡುತ್ತ ಭಾರತ ದೇಶ ಜಗತ್ತಿನ ಒಂದು ವಿಭಾಗವಾಗಿದೆ. ಜಗತ್ತಿನ ಘಟನೆಗಳು ಭಾರತ ದೇಶದ ಮೇಲೂ ಪರಿಣಾಮ ಬೀರುತ್ತವೆ. ಅಮೇರಿಕ ಮತ್ತು ಅದರ ಸ್ನೇಹಿತರು; ರಷ್ಯಾ ಮತ್ತು ಅದರ ಬೆಂಬಲಿತರು — ಹೀಗೆ ಎರಡು ಜಗತ್ತುಗಳಿವೆ. ಅಮೇರಿಕ ಮತ್ತು ಅದರ ಬೆಂಬಲಿತ ರಾಷ್ಟ್ರಗಳಲ್ಲಿ ನಿರುದ್ಯೋಗ ಅತಿಯಾಗಿ ಬೆಳೆಯುತ್ತಿದೆ. ಭೀಕರ ಅರ್ಥಿಕ ಬಿಕ್ಕಟ್ಟನ್ನು ಈ ದೇಶಗಳು ಎದುರಿಸುತ್ತಿವೆ. ಕಾರಣದಿಂದಾಗಿ ಉತ್ಪಾದಿತ ವಸ್ತುಗಳು ಮಾರಾಟವಾಗುತ್ತಿಲ್ಲ. ಅವುಗಳನ್ನೆಲ್ಲಾ ವಿದೇಶಕ್ಕೆ ರಫ್ತು ಮಾಡಬೇಕಾಗುತ್ತದೆ. ಆರ್ಥಿಕ ಮುಗ್ಗಟ್ಟಿನ ಪರಿಹಾರಕ್ಕೆ ಯಾವುದೇ

(8ನೇ ಪುಟನೋಡಿ)

ಸಂಪಾದಕೀಯ

ಶಿಕ್ಷಣದ ವ್ಯಾಪಾರ ನಿಲ್ಲಲಿ

ಸ್ವತಂತ್ರ ಭಾರತದ ಮೂರೂವರೆ ದಶಕಗಳ ಸುದೀರ್ಘ ಆಡಳಿತೆಯ ನಂತರವೂ 45 ಕೋಟಿ ಭಾರತೀಯರು ಇನ್ನೂ ಅನಕ್ಷರಸ್ಥರಾಗೇ ಉಳಿದಿದ್ದಾರೆ. ಹತ್ತು ವರ್ಷಗಳ ಅವಧಿಯೊಳಗೆ ಆದರಿಂದ ಹದಿನಾಲ್ಕು ವಯೋಮಿತಿಯ ಮಕ್ಕಳಿಗೆಲ್ಲಾ ಸಾರ್ವತ್ರಿಕ ಉಚಿತ ಖಡ್ಡಾಯ ಶಿಕ್ಷಣ ನೀಡುವುದಾಗಿ ಭಾರತ ಸಂವಿಧಾನದಲ್ಲಿ ಲಿಖಿತ ಭರವಸೆ ನೀಡಲಾಗಿದೆ. ಆದರೆ ಸಂವಿಧಾನ ರಚನೆಯಾಗಿ 32 ವರ್ಷಗಳು ಸಂದರೂ ಈ ಘೋಷಣೆ ಘೋಷಣೆಯಾಗಿಯೇ ಉಳಿದಿದೆ. ಈ ವಯೋಮಿತಿಯ 4 ಕೋಟಿ 70 ಲಕ್ಷ ಮಕ್ಕಳು ಕನಿಷ್ಠ ಪ್ರಾಥಮಿಕ ಶಿಕ್ಷಣದ ಸೌಲಭ್ಯದಿಂದಲೂ ವಂಚಿತರಾಗಿ ಬೀದಿ ಪಾಲಾಗಿದ್ದಾರೆ. ತಮ್ಮ ಹೊಟ್ಟೆಪಾಡಿಗಾಗಿ ಸುಮಾರು 3 ಕೋಟಿ ಮಕ್ಕಳು ಬಾಲ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಇನ್ನು ಶಾಲೆಗೆ ಸೇರಿದ ಶೇ. 60ರಷ್ಟು ಮಕ್ಕಳು ಪ್ರಾಥಮಿಕ ಹಂತದಲ್ಲೇ ತಮ್ಮ ಬಡತನದಿಂದಾಗಿ ವಿದ್ಯಾಭ್ಯಾಸ ತೊರೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬಡತನದ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಶೇ. 60 ರಷ್ಟು ಭಾರತೀಯರ ಪಾಲಿಗೆ ಉನ್ನತ ಶಿಕ್ಷಣವು ಕನಸಿನ ಮಾತಾಗಿಯೇ ಉಳಿದಿದೆ.

ಶಿಕ್ಷಣ ಕ್ಷೇತ್ರವು ಇಂದು ಒಳ್ಳೆಯ ವ್ಯಾಪಾರ ಸಾಧ್ಯಮವಾಗಿದ್ದು ಶಾಲಾ ಕಾಲೇಜುಗಳು ವಿದ್ಯೆ ಎಂಬ ಸರಕಿನ ಮಾರಾಟದ ಅಂಗಡಿಗಳಾಗಿವೆ. ಅಧ್ಯಾಪಕರನ್ನು, ಪೋಷಕರನ್ನು, ಬಡ ವಿದ್ಯಾರ್ಥಿಗಳನ್ನು ನಿರ್ಧಯವಾಗಿ ಸುಲಿಯಲು ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಲೈಸೆನ್ಸ್ ನೀಡಲಾಗಿದೆ. ಸರ್ಕಾರದಿಂದ ಶೇಖಡಾ 93 ರಷ್ಟು ಸಹಾಯ ಧನ ಪಡೆದರೂ ಸಹ ಖಾಸಗೀ ವಿದ್ಯಾ ಸಂಸ್ಥೆಗಳು ಡೊನೇಷನ್, ಕ್ಯಾಪಿಟೇಶನ್, ದುಬಾರಿ ಟ್ಯೂಶನ್ ಫೀಗಳ ಮೂಲಕ ಹಣ ದೋಚುತ್ತಿವೆ. ಈ ಸುಲಿಗೆಯ ಯಾಗಕ್ಕೆ ತಡೆಯೇ ಇಲ್ಲದಾಗಿದೆ. ಕರ್ನಾಟಕದಲ್ಲಂತೂ ಬಹುತೇಕ ಶಾಲಾ ಕಾಲೇಜುಗಳು ಧಾರ್ಮಿಕ ಸಂಸ್ಥೆಗಳ, ಭ್ರಷ್ಟ ರಾಜಕಾರಣಿಗಳ, ಕೈಗಾರಿಕೋದ್ಯಮಿಗಳ ಹಿಡಿತದಲ್ಲಿವೆ.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ 50 ಸಾವಿರ ರೂಪಾಯಿಗಳಿಂದ ಪ್ರಾರಂಭವಾಗಿ, ವೈದ್ಯಕೀಯ ಕಾಲೇಜುಗಳಲ್ಲಿ ಒಂದು ಲಕ್ಷದ ಅವರತ್ತು ಸಾವಿರ ರೂಪಾಯಿಗಳವರೆಗೂ ಅಧಿಕೃತವಾಗಿಯೇ ಕ್ಯಾಪಿಟೇಶನ್ ಫೀ ವಸೂಲಿ ಮಾಡಿ ಸೀಟುಗಳನ್ನು ಮಾರಲಾಗುತ್ತಿದೆ. ಇದರಿಂದಾಗಿ ಅರ್ಹತೆ ಪಡೆದ ಬಡ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯದೆ ಉನ್ನತ ಶಿಕ್ಷಣವು ಹಣವಂತರ ಸೊತ್ತಾಗಿ ಉಳಿದಿದೆ.

ಈ ಸಂದರ್ಭದಲ್ಲಿ ಆಂಧ್ರ ಪ್ರದೇಶದ ಎನ್. ಟಿ. ರಾಮರಾವ್ ಸರ್ಕಾರವು ಕ್ಯಾಪಿಟೇಶನ್ ಶುಲ್ಕವನ್ನು ರದ್ದುಗೊಳಿಸಿ ಸುಗ್ರೀವಾಜ್ಞೆ ಹೊರಡಿಸಿದೆ. ಈ ದಿಟ್ಟ ಹೆಜ್ಜೆಯು ಪ್ರಶಂಸಾರ್ಹ, ನಮ್ಮ ರಾಜ್ಯದಲ್ಲಿ ಗುಂಡೂರಾವ್ ಸರ್ಕಾರವು ಕೇಂದ್ರ ಸರ್ಕಾರದಿಂದ ಒತ್ತಾಯ ಬಂದರೂ ಸಹ ಕ್ಯಾಪಿಟೇಶನ್ ಫೀ ರದ್ದು ಮಾಡಲಿಲ್ಲ. ಇದೀಗ ಕೆಲವು ಖಾಸಗೀ ವಿದ್ಯಾ ಸಂಸ್ಥೆಗಳ ಮಾಲೀಕರು ಕರ್ನಾಟಕ ಹೈಕೋರ್ಟಿನಲ್ಲಿ ಈ ಬಗ್ಗೆ ತಡೆಯಾಜ್ಞೆ ತಂದಿದ್ದಾರೆ. ಹೊಸದಾಗಿ ಅಧಿಕಾರ ವಹಿಸಿಕೊಂಡಿರುವ ಜನತಾರಂಗ ಸರ್ಕಾರದ ಶಿಕ್ಷಣ ಮಂತ್ರಿ ಮಾನ್ಯ ಶ್ರೀ ಬಿ. ರಾಚಯ್ಯನವರು ಇತ್ತೀಚಿನ ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಡೆ ಆಜ್ಞೆಯನ್ನು ತೆರವು ಮಾಡಲು ಪ್ರಯತ್ನಿಸುತ್ತಿರುವುದಾಗಿ ಹೇಳಿದ್ದಾರೆ. ಜನತಾರಂಗದ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿರುವಂತೆ ಕ್ಯಾಪಿಟೇಶನ್ ಶುಲ್ಕವನ್ನು ಶೀಘ್ರದಲ್ಲೇ ರದ್ದುಗೊಳಿಸುವುದಾಗಿ ಭರವಸೆ

(8ನೇ ಪುಟ ನೋಡಿ)

ನೆರೆಹೊರೆ

ಕೇರಳ :

ಆಳುವ ರಂಗ ಜನತೆಯಿಂದ ದೂರವಾಗಿದೆ

ಕಳೆದ ಡಿಸೆಂಬರ್ 30 ರಂದು ಆಳುವ ರಂಗದ ಅಭ್ಯರ್ಥಿಗಳ ಮುಗಿ ನಡಿಯಲ್ಲೇ ತಿರುವನಂತಪುರದಲ್ಲಿ ನಡೆದ ಗೂಂಡಾಗಿರಿಯ ಸಮಯದಲ್ಲಿ ತೆಪ್ಪಗೆ ನೋಡುತ್ತಿದ್ದ ವಯಲಾರ್ ರವಿಯವರ ಪೋಲೀಸರು ಜನವರಿ 18 ರಂದು ವಿರೋಧ ಪಕ್ಷಗಳ ಕರೆಯ ಮೇಲೆ ನಡೆಯಲಿದ್ದ ಕೇರಳ ಬಂದ್‌ನ ಮುನ್ನಾ ದಿನ ಈ ಪಕ್ಷಗಳ ಮೂರು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರನ್ನು 'ಸಮಾಜ ವಿರೋಧಿ'ಗಳೆಂದು ಬಂಧಿಸಿದರು. ಮುಖ್ಯ ಮಂತ್ರಿಗಳು ಹಾಗೂ ಗೃಹ ಮಂತ್ರಿಗಳು ರಾಷ್ಟ್ರೀಯ ಭದ್ರತಾ ಶಾಸನವನ್ನು ಉಪಯೋಗಿಸುವುದಾಗಿಯೂ ಬೆದರಿಸಿದರು. ಜನವರಿ 17 ರಂದು ಕೈಗೊಂಡ ಅನೇಕ ಕ್ರಮಗಳಲ್ಲಿ ಸ್ವಲ್ಪ ಅಂಶವನ್ನಾದರೂ ಡಿಸೆಂಬರ್ 30 ರಂದು ರಾಜ್ಯದ ಹೆಸರಿಗೆ ಮಸಿ ಬಳಿದ ದುರಂತವನ್ನು ತಪ್ಪಿಸಬಹುದಾಗಿತ್ತು.

ಜನವರಿ 18ರ ಬಂದ್ ಬಗ್ಗೆ ತಿಂಗಳ ಹಿಂದೆಯೇ ನಿರ್ಧರಿಸಲಾಗಿತ್ತು. ಈ ಬಂದ್ ಈಗಿನ ಆಳುವರಂಗ ವಿರೋಧ ಪಕ್ಷವಾಗಿದ್ದಾಗ ಮಾಡುತ್ತಿದ್ದಂತೆ ಸರಕಾರವನ್ನು ಉರುಳಿಸುವ ಉದ್ದೇಶದಿಂದ ಮಾಡಿದ್ದಲ್ಲ. ಸರಕಾರದ ಆರ್ಥಿಕ, ರಾಜಕೀಯ ಧೋರಣೆಗಳನ್ನು ಪ್ರತಿಭಟಿಸಲು ಇದನ್ನು ಯೋಚಿಸಲಾಗಿತ್ತು. ಈ ಬಗ್ಗೆ ಎಡ-ಪ್ರಜಾಪ್ರಭುತ್ವ ರಂಗದ ನಾಯಕರು ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಿ ಹಲವು ಬೇಡಿಕೆಗಳನ್ನು ಮುಂದಿಟ್ಟಿದ್ದರು. ಆದರೆ ಈ ಬಗ್ಗೆ ಕರುಣಾಕರನ್ ಸರಕಾರ ಉಪೇಕ್ಷೆಯಿಂದ ಇದ್ದು ಬಂದ್‌ನ ದಿನ ಸಮೀಪ ವಾಗುತ್ತಿದ್ದಂತೆ ಬಂದ್‌ನ ಅಗತ್ಯವಿಲ್ಲ ಎಂದಷ್ಟೇ ಹೇಳಲಾರಂಭಿಸಿತು. ಸರಕಾರಕ್ಕೆ ತನ್ನ ಧೋರಣೆಗಳಿಂದಾಗಿ ಜನತೆಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸ್ವಲ್ಪವಾದರೂ ಕಾಳಜಿಯಿದ್ದಿದ್ದರೆ ಎಡ—ಪ್ರಜಾಪ್ರಭುತ್ವ ರಂಗದ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಿ ಜನತೆಗೆ ಜನವರಿ 18 ರಂದು ಆದ ತೊಂದರೆಯನ್ನು ತಪ್ಪಿಸಬಹುದಾಗಿತ್ತು. ಆದರೆ ಹಾಗೆ ಮಾಡದೆ ಹಿಂದೂ ಹಾಗೂ ಮುಸ್ಲಿಂ ಕೋಮುವಾದಿಗಳ ಬಗ್ಗೆ ಉದಾರಭಾವ ತೋರಿದ ಆಳುವ ರಂಗ ಶಾಂತಿಯುತವಾಗಿ ಕಾನೂನು ಬದ್ಧವಾಗಿ ಕಾರ್ಯ ನಿರ್ವಹಿಸುತ್ತಿರುವ ವಿರೋಧ ಪಕ್ಷಗಳ ವಿರುದ್ಧ ಮಾತ್ರ ಏಕೆ ಪೋಲೀಸ್ ಬಲ ಪ್ರದರ್ಶನ ಮಾಡುತ್ತಾರೆ ಎಂಬುದು ಈಗ ಜನರೆಲ್ಲಾ ಕೇಳುವ ಸ್ವಾಭಾವಿಕ ಪ್ರಶ್ನೆ.

ಜನವರಿ 18 ರಂದು ಯಶಸ್ವಿಯಾಗಿ ನಡೆದ ಕೇರಳ ಬಂದ್ ಈ ಪ್ರಶ್ನೆಗೆ ಸ್ವಲ್ಪ ಮಟ್ಟಿನ ಉತ್ತರ ನೀಡಿದೆ. ಕೇರಳದ ಕರುಣಾಕರನ್ ನೇತೃತ್ವದ ಆಳುವರಂಗ ಜನತೆಯಿಂದ ದೂರವಾಗಿದೆ ಎಂಬುದು ಇದರಿಂದ ಯಾರಿಗಾದರೂ ಸ್ಪಷ್ಟವಾಗಿರಬೇಕು. ಆಳುವ ರಂಗಕ್ಕೆ ಸಹಾನುಭೂತಿ ಹೊಂದಿದ ಕೇರಳದ ಪತ್ರಿಕೆಗಳೂ ಇದನ್ನು ಪರೋಕ್ಷವಾಗಿ ಒಪ್ಪಿಕೊಂಡಿವೆ. ಆಳುವ ರಂಗಕ್ಕೆ ಸೇರಿದ ಹಲವರು ಜನವರಿ 18ರ ಬಂದ್‌ಗೆ ಕಂಡುಬಂದ ಅಪಾರ ಜನ ಬೆಂಬಲದಿಂದಾಗಿ ಕಳವಳಗೊಂಡಿದ್ದಾರೆ ಎಂಬ ವರದಿಗಳು ಬಂದಿವೆ. ಆಂಧ್ರ ಪ್ರದೇಶ ಹಾಗೂ ಕರ್ನಾಟಕದಲ್ಲಿ ಕಾಂಗ್ರೆಸ್ (ಐ) ತನ್ನ ಧೋರಣೆಗಳಿಂದಾಗಿ ಕಂಡ ದುರ್ಗತಿಯ ಹಿನ್ನೆಲೆಯಲ್ಲಿ ಅವರು ಈ ರೀತಿ ಕಳವಳಪಡುತ್ತಿದ್ದಾರೆ. ಆದರೆ ಅವರ ಈ ಕಳವಳ ಕರುಣಾಕರನ್ ಹಾಗೂ ಈ ಹಿಂದಿನ ಅಂತೋಣಿ ಕಾಂಗ್ರೆಸ್ಸಿನ ಅವರ ಸಹೋದ್ಯೋಗಿಗಳನ್ನು ಸರಿದಾರಿಗೆ ತರಲು ಶಕ್ತವಾಗುತ್ತದೋ ಎಂಬುದನ್ನು ಕೇರಳದ ಜನತೆ ಕಾದು ನೋಡುತ್ತಿದೆ.

ದೆಹಲಿ :

ಮತ್ತೆ ಜನರ ಪ್ರಾತಿನಿಧ್ಯದ ಆಡಳಿತಕ್ಕೆ ತಯಾರಿ

ಕಾಂಗ್ರೆಸ್ (ಐ) ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ 1980 ರಲ್ಲಿ ಆ ಪಕ್ಷ ಪ್ರಜಾಪ್ರಭುತ್ವ ವಿರೋಧಿ ಧೋರಣೆಯ ಮೊದಲ ಸೂಚಕವಾಗಿ ವಿಸರ್ಜನೆಗೊಂಡಿದ್ದ ದೆಹಲಿ ಪುರಸಭೆ ಹಾಗೂ ನಗರ ಪಾಲಿಕೆಗಳಿಗೆ ಫೆಬ್ರವರಿ 5 ರಂದು ಚುನಾವಣೆಗಳು ನಡೆಯಲಿದ್ದು ಚುನಾವಣಾ ಪ್ರಚಾರ ಬಿರುಸುಗೊಳ್ಳುತ್ತಿದೆ.

ಈಗಾಗಲೇ ವರದಿಯಾಗಿರುವಂತೆ ಸಿ.ಪಿ ಐ (ಎಂ), ಸಿ.ಪಿ.ಐ., ಡಿ ಎಸ್. ಪಿ., ಕಾಂಗ್ರೆಸ್ (ಜೆ), ಲೋಕದಳ(ಕೆ) ಸೇರಿಕೊಂಡು ಪ್ರಗತಿಪರ ಪ್ರಜಾಸತ್ತಾತ್ಮಕ ರಂಗ ಏರ್ಪಡಿಸಿಕೊಂಡು ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿವೆ. ಪ್ರಮುಖ ವಿರೋಧ ಪಕ್ಷವಾದ ಬಿ ಜೆ ಪಿ. ತನ್ನ ಆರ್.ಎಸ್.ಎಸ್. ಮೂಲದ ಕೋಮುವಾದೀ ಸ್ವಭಾವದಿಂದಾಗಿ ಕಾಂಗ್ರೆಸ್ (ಐ)ಗೆ ಪರ್ಯಾಯ ನೀಡಲು ಸಾಧ್ಯವಿಲ್ಲವಾದ್ದರಿಂದ ಕಾಂಗ್ರೆಸ್ (ಐ) ಗೆ ಒಂದು ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಪರ್ಯಾಯ ಒದಗಿಸಲು ಈ ರಂಗದ ರಚನೆಯಾಯಿತು. ಬಿ.ಜೆ.ಪಿ. ಬಿಟ್ಟು ಬೇರೆಲ್ಲಾ ಶಕ್ತಿಗಳು ಕಾಂಗ್ರೆಸ್ (ಐ) ವಿರುದ್ಧ ಒಂದಾಗಬೇಕೆಂದು ಸಿ. ಪಿ. ಐ. (ಎಂ) ನ ದೆಹಲಿ ರಾಜ್ಯ ಸಮಿತಿಯ ಆಶಯವಾಗಿತ್ತು. ಆದರೆ ಜನತಾ ಪಕ್ಷದ ಅವಾಸ್ತವ ನೀತಿಯಿಂದಾಗಿ ಅದು ಪೂರ್ಣವಾಗಿ ಈಡೇರಲಿಲ್ಲ. ಆದರೂ ತಾನು ಸ್ಪರ್ಧಿಸದೇ ಇರುವಲ್ಲಿ ಜನತಾ ಪಕ್ಷವನ್ನು ಬೆಂಬಲಿಸಲು ಪ್ರಗತಿಪರ ರಂಗ ಏಕಪಕ್ಷೀಯವಾಗಿಯೇ ನಿರ್ಧರಿಸಿದೆ.

ನಗರಪಾಲಿಕೆಯ ಒಂದು ಸ್ಥಾನಕ್ಕೆ ಹಾಗೂ ಪುರಸಭೆಯ ಐದು ಸ್ಥಾನಗಳಿಗೆ ಸ್ಪರ್ಧಿಸುತ್ತಿರುವ ಸಿ. ಪಿ. ಐ. (ಎಂ)ನ ದೆಹಲಿ ರಾಜ್ಯ ಸಮಿತಿ ತನ್ನ ಮುದ್ರಿತ ಚುನಾವಣಾ ಮನವಿಯಲ್ಲಿ ಕಾಂಗ್ರೆಸ್ (ಐ) ನಿರ್ದೇಶಿತ ದೆಹಲಿ ಆಳಿತದ ಕಳೆದ ಮೂರು ವರ್ಷಗಳಲ್ಲಿ ಜೀವನದ ಎಲ್ಲಾ ರಂಗಗಳಲ್ಲಿ ಪರಿಸ್ಥಿತಿ ಹದಗೆಡುತ್ತಾ ಬಂದಿರುವುದನ್ನು, ಜನತೆ ಏರುತ್ತಿರುವ ಬೆಲೆ, ಲಂಗುಲಗಾಮಿಲ್ಲದ ಕ್ರಿಮಿನಲ್ ಶಕ್ತಿಗಳು, ಭ್ರಷ್ಟಾಚಾರ, ವಸತಿ ಹಾಗೂ ಸಾರಿಗೆಯ ಅಭಾವದಿಂದ ನರಳುತ್ತಿರುವುದನ್ನು ಮಾತ್ರವಲ್ಲ, ಜನತೆಯ ವಿವಿಧ ವಿಭಾಗಗಳು ನಡೆಸುತ್ತಿರುವ ಹೋರಾಟಗಳನ್ನು ಆಡಳಿತ ದಮನ ಮಾಡುತ್ತಿರುವುದನ್ನು ಗುರುತಿಸಿದೆ. ಹಾಗೂ ದಿಲ್ಲಿಗೆ ರಾಜ್ಯದ ದರ್ಜೆಯ ಬೇಡಿಕೆಯನ್ನೂ ಸೇರಿದಂತೆ ದಿಲ್ಲಿಯ ಆಡಳಿತದಲ್ಲಿ ತೀವ್ರ ಸ್ವರೂಪದ ಬದಲಾವಣೆಯಾಗಬೇಕು, ಹೆಂಗಸರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಅಪರಾಧಗಳ ವಿರುದ್ಧ ದೃಢಕ್ರಮ ಕೈಗೊಳ್ಳಬೇಕು, ವರದಕ್ಷಿಣೆ ವಿರೋಧೀ ಕಾನೂನನ್ನು ಮತ್ತಷ್ಟು ಬಿಗಿಗೊಳಿಸಬೇಕು, ಯುವಕರಿಗೆ ನಿರುದ್ಯೋಗ ಭತ್ಯೆ ನೀಡಬೇಕು, ಸುಮಾರು 15 ಲಕ್ಷ ದುಡಿಯುವ ಜನರು ವಾಸಿಸುತ್ತಿರುವ ಪುನರ್ವಸತಿ ಕಾಲೋನಿಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಇನ್ನೂ ಹೆಚ್ಚು ಸಂಪನ್ಮೂಲ ಒದಗಿಸಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಬೇಕು ಹಾಗೂ 500 ರೂ. ಕನಿಷ್ಟ ವೇತನವನ್ನು ಜ್ಯಾರಿಗೊಳಿಸಬೇಕು ಎಂಬುದು ಸಿ. ಪಿ. ಐ. (ಎಂ) ನಿಲುವು ಎಂದು ಚುನಾವಣಾ ಮನವಿಯಲ್ಲಿ ಹೇಳಲಾಗಿದೆ.

ತುಮಕೂರು :

ರೈತ–ಕೃಷಿ ಕೂಲಿಗಾರರ ಮತ್ತು ಕಾರ್ಮಿಕರ ಸಂಘದ ಉದ್ಘಾಟನೆ

ತುಮಕೂರು ಕಸಬಾ ಅರಕೆರೆ ಗ್ರೂಪ್ ಪಂಚಾಯಿತಿಯ ಕುಚ್ಚಂಗಿ ಪಾಳ್ಯದ ರೈತ-ಕೃಷಿ ಕೂಲಿಗಾರರ ಮತ್ತು ಕಾರ್ಮಿಕರ ಸಾಮೂಹಿಕ ಸಭೆಯು ತಾರೀಖು 26-1-1983ನೇ ಬುಧವಾರ ಸಂಜೆ ಕುಚ್ಚಂಗಿಪಾಳ್ಯದಲ್ಲಿ ನಡೆಸಲ್ಪಟ್ಟಿತು.

ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಡಿ. ಜಯಣ್ಣನವರು ವಹಿಸಿದ್ದರು. ಗ್ರಾಮದ ಸರ್ವರ ಇಚ್ಛೆಯಂತೆ ತುಮಕೂರು ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಮ್ರೇಡ್ ಟಿ. ಕೆ. ಗೋವಿಂದ ರಾಜುರವರ ನೇತೃತ್ವದಲ್ಲಿ ಊರುಕೆರೆಯ 'ರೈತ-ಕೃಷಿ ಕೂಲಿಕಾರರ ಮತ್ತು ಕಾರ್ಮಿಕರ ಸಂಘ'ದ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ವಿ. ರಂಗಪ್ಪದಾಸರು ಸ್ಥಳೀಯ ಶಾಖೆಯನ್ನು ಉದ್ಘಾಟಿಸಿದರು.

ಸಭೆಗೆ ಮುಖ್ಯ ಅತಿಥಿಗಳಾಗಿ ತುಮಕೂರು ಜಿಲ್ಲಾ ರೈತ ಸಂಘದ ಉಪಾಧ್ಯಕ್ಷರಾದ ಶ್ರೀ ಪಂಡಿತ ದಾಸಪ್ಪನವರೂ, ಊರುಕೆರೆ ರೈತ-ಕೃಷಿ ಕೂಲಿಗಾರರ ಮತ್ತು ಕಾರ್ಮಿಕರ ಸಂಘದ ಸಂಚಾಲಕರಾದ ಶ್ರೀ ಟಿ. ಹೆಚ್. ನರಸಿಂಹಯ್ಯನವರು, ಎಂ. ಗೋಪಾಲಯ್ಯನವರು ಆಗಮಿಸಿದ್ದರು.

ಸಭೆಯ ತೀರ್ಮಾನದಂತೆ ಸ್ಥಳೀಯ ಸಮಸ್ಯೆಗಳ ನಿವಾರಣೆಗಾಗಿ ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ತಾತ್ಕಾಲಿಕ ಕಾರ್ಯಕಾರಿ ಮಂಡಳಿಯೊಂದನ್ನು ರಚಿಸಿ ಹೋರಾಟ ಕಾರ್ಯಕ್ರಮಗಳನ್ನು ರೂಪಿಸಲು ನಿಶ್ಚಯಿಸಲಾಯಿತು.

ಶ್ರೀ ಚಿಕ್ಕಣ್ಣ-ಅಧ್ಯಕ್ಷರು, ಶ್ರೀ ಹೆಚ್. ಚಿಕ್ಕಣ್ಣ-ಉಪಾಧ್ಯಕ್ಷರು, ಶ್ರೀ ಬಿ ವಿ ತಿಮ್ಮಯ್ಯ-ಕಾರ್ಯದರ್ಶಿ. ಶ್ರೀ ಆರ್. ರಂಗಸ್ವಾಮಯ್ಯ - ಖಜಾಂಚಿ, ಶ್ರೀ ಡಿ. ಜಯಣ್ಣ - ಸಂಘಟನಾ ಕಾರ್ಯದರ್ಶಿ. ಅಲ್ಲದೆ ಹತ್ತು ಮಂದಿ ಕಾರ್ಯಕಾರೀ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ.

ಈ ಮೇಲ್ಕಂಡ ಸಮಿತಿಯು ಅಖಿಲ ಭಾರತ ಕಿಸಾನ್ ಸಭಾ ಶಾಖೆಯಾದ ತುಮಕೂರು ಜಿಲ್ಲಾ ರೈತ ಸಂಘದ ಧ್ಯೇಯ ಧೋರಣೆಗಳನ್ನು ಒಪ್ಪಿ ಜಿಲ್ಲಾ ಸಮಿತಿಗೆ ನೋಂದಾವಣೆ ಮಾಡಿಕೊಳ್ಳಬೇಕೆಂದು ಸರ್ವಾನುಮತ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

O

ಕಾಮ್ರೇಡ್ ಶಂಕರ್ ಗುಪ್ತ ನಿಧನ

ಸಿ. ಪಿ. ಐ. (ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮಿತಿ ಸದಸ್ಯರೂ, ಪ. ಬಂಗಾಳ ಸರ್ಕಾರದ ವಿದ್ಯುಚ್ಛಕ್ತಿ ರಾಜ್ಯ ಸಚಿವರೂ ಆಗಿದ್ದ ಕಾಂ। ಶಂಕರ್ ಗುಪ್ತರವರು ಜನವರಿ 22, 1983 ರಂದು ತಮ್ಮ 43ನೆಯ ವಯಸ್ಸಿನಲ್ಲಿ ನಿಧನರಾದರು. ಇವರ ನಿಧನದಿಂದಾಗಿ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಘಟಕವು ನಿಸ್ವಾರ್ಥ ಹಾಗೂ ನಿಷ್ಠಾವಂತ ತರುಣ ನಾಯಕರೊಬ್ಬರನ್ನು ಕಳೆದುಕೊಂಡಿದೆ.

1940ರಲ್ಲಿ ಜನಿಸಿದ ಕಾಂ। ಶಂಕರ್ ಗುಪ್ತರವರು ಅಂತರರಾಷ್ಟ್ರೀಯ ಸಂಬಂಧಗಳ ಕುರಿತು ಜಾಧವ್‌ಪುರ ವಿಶ್ವ ವಿದ್ಯಾನಿಲಯದಲ್ಲಿ ತಮ್ಮ ಸ್ನಾತಕೋತ್ತರ ಪದವಿ ಪಡೆದಿದ್ದರು. ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಇವರು 1960ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದರು. ಕಮ್ಯುನಿಸ್ಟ್ ಪಕ್ಷ ಇಬ್ಭಾಗವಾದ ಸಂದರ್ಭದಲ್ಲಿ ಇವರು ಬಲ ಪರಿಷ್ಕರಣವಾದಿಗಳನ್ನು ತಿರಸ್ಕರಿಸಿ ಸಿ.ಪಿ ಐ. (ಎಂ) ನೊಂದಿಗೆ ಉಳಿದರು. ಪರಿಷ್ಕರಣವಾದಿಗಳ ಹಿಡಿತದಿಂದ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಹಾಗೂ ಯುವಜನ ಚಳುವಳಿಗಳನ್ನು ರಕ್ಷಿಸುವಲ್ಲಿ ತಮ್ಮೆಲ್ಲಾ ಶ್ರಮವನ್ನು ಉಪಯೋಗಿಸಿದರು. ಸಿ.ಪಿ ಐ. (ಎಂ) ಕಾರ್ಯಕರ್ತರ ಮೇಲಿನ ಧಾಳಿಯನ್ನೇ ಗುರಿಯನ್ನಾಗಿ ಮಾಡಿಕೊಂಡಿದ್ದ ಎಡ-ಸಾಹಸವಾದಿ ನಕ್ಸಲೀಯರ ವಿರುದ್ಧ ನಡೆದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ನಿಧನರಾಗುವಾಗ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ ವೈ ಎಫ್. ಐ) ಪ. ಬಂಗಾಳ ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾಗಿದ್ದರು.

ಕಾಂ। ಶಂಕರ ಗುಪ್ತರವರು ಉತ್ತರ ಬಂಗಾಳ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಸಂದರ್ಭದಲ್ಲಿ ಪಾರ್ಟಿಯ ಕರೆಯ ಮೇರೆಗೆ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ 'ಪೀಪಲ್ಸ್ ಡೆಮಾಕ್ರಸಿ'(ಪಕ್ಷದ ರಾಷ್ಟ್ರೀಯ ಮುಖ ಪತ್ರ)ಗೆ ಸೇರಿದರು. 1977ರ ಚುನಾವಣೆಯಲ್ಲಿ ಎಡರಂಗವು ಪ. ಬಂಗಾಳದಲ್ಲಿ ಸರ್ಕಾರ ರಚಿಸಿದ ನಂತರ ಕಾಂ। ಶಂಕರ್ ಗುಪ್ತರವರನ್ನು ಮುಖ್ಯ ಮಂತ್ರಿ ಜ್ಯೋತಿ ಬಸುರವರ ರಾಜಕೀಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಯಿತು. ನಂತರ ಮೇ 1982ರಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಜಾಧವ್‌ಪುರ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದು ಬಂದು ವಿದ್ಯುತ್ ಮಂತ್ರಿಯಾದರು.

ಕಾಂ। ಶಂಕರ ಗುಪ್ತರವರ ಅಕಾಲಿಕ ನಿಧನಕ್ಕೆ ಕೇಂದ್ರ ಸಮಿತಿ ಕ್ರಾಂತಿಕಾರೀ ಶ್ರದ್ಧಾಂಜಲಿಯನ್ನರ್ಪಿಸುತ್ತದೆ. ಹಾಗೂ ಮೃತರ ಕುಟುಂಬಕ್ಕೆ ತನ್ನ ತೀವ್ರ ಸಂತಾಪ ವ್ಯಕ್ತಪಡಿಸಿದೆ

[ಜನವರಿ 25 ರಿಂದ 28ರವರೆಗೆ ಕಲ್ಕತ್ತಾದಲ್ಲಿ ನಡೆದ ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಸಭೆಯಲ್ಲಿ ಈ ಕುರಿತು ಸಂತಾಪ ಸೂಚಕ ನಿರ್ಣಯ ಕೈಗೊಳ್ಳಲಾಗಿದೆ.]

ಆರ್ಥಿಕ ಸಮೀಕ್ಷೆ :

ಏಷ್ಯಾಡ್ — ಅನಿಯಂತ್ರಿತ ದುಂದುವೆಚ್ಚ, ಆರ್ಥಿಕ ವಿನಾಶ

—ಆರ್. ಚಂದ್ರ

1982ರ ನವಂಬರ್ 19 ರಿಂದ ಡಿಸೆಂಬರ್ 4ರವರೆಗೆ ದೆಹಲಿಯಲ್ಲಿ ನಡೆದ ಏಷ್ಯಾಡ್‌ನಲ್ಲಿ 33 ದೇಶಗಳ 6000 ಕ್ರೀಡಾಪಟುಗಳು ಭಾಗವಹಿಸಿದ್ದರು. ವಿವಿಧ ಆಟೋಪಗಳ 21 ವಿಶಿಷ್ಟ ಕ್ಷೇತ್ರಗಳಲ್ಲಿ 580 ಪದಕಗಳಿಗಾಗಿ ತೀವ್ರ ಸ್ಪರ್ಧೆ ನಡೆಯಿತು. ಈ ಕ್ರೀಡೋತ್ಸವವನ್ನು 75000 ಜನ ಪ್ರೇಕ್ಷಕರು ದೇಹಲಿಯ ಕ್ರೀಡಾಂಗಣಗಳಲ್ಲಿಯೂ, ಒಂದು ಮಿಲಿಯ ಜನ ಪ್ರೇಕ್ಷಕರು ಎರಡು ಲಕ್ಷ ದೂರದರ್ಶನಗಳಲ್ಲಿಯೂ ನೋಡಿ ಆನಂದಿಸಿದರು. ಏಷ್ಯಾಡ್‌ನಲ್ಲಿ ಭಾರತದ ಕ್ರೀಡಾಪಟುಗಳ ಸಾಧನೆಗಳನ್ನು ಭಾರೀ ಹೊಗಳಲಾಗಿದೆ! ಏಷ್ಯಾಡ್ ಸಂಘಟಿಸಿದ ಭಾರತ ಮುಂದೆ ಆಫ್ರೋ-ಏಷ್ಯಾ ಕ್ರೀಡೋತ್ಸವವನ್ನೂ 1992ರಲ್ಲಿ ನಡೆಯಲಿರುವ ಒಲಂಪಿಕ್ ಕ್ರೀಡೋತ್ಸವವನ್ನೂ ನಡೆಸಲು ಅರ್ಹತೆ ಪಡೆದಿದೆ ಎಂದು ಹೊಗಳಲಾಗಿದೆ!

ತ್ರಿಪುರಾ, ಆಂಧ್ರ ಮತ್ತು ಕರ್ನಾಟಕ ರಾಜ್ಯ ವಿಧಾನ ಸಭೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗಳ ಪ್ರಚಾರಗಳಲ್ಲಿ ಇಂದಿರಾ ಕಾಂಗ್ರೆಸ್ ತನ್ನ ಸರಕಾರ ಏಷ್ಯಾಡ್ ನಡೆಸಿದ ಕೀರ್ತಿಯನ್ನೇ ಬಂಡವಾಳವಾಗಿ ಬಳಸಿತ್ತು! ಎಂತಹ ಅಪನತಿ! 1970ರ 'ಗರೀಬಿ ಹಟಾವೋ', 1975–77ರ ತುರ್ತು ಪರಿಸ್ಥಿತಿಯ '20 ಅಂಶಗಳ ಆರ್ಥಿಕ ಕಾರ್ಯಕ್ರಮಗಳು', 1980ರ 'ಸುಭದ್ರ ಸರಕಾರ' ಮತ್ತು 'ಬೆಲೆ ನಿಯಂತ್ರಣ', ಇತ್ಯಾದಿ ಘೋಷಣೆಗಳೆಲ್ಲಾ ಈಗ ಹಿಂದೆ ಬಿದ್ದಿವೆ. ಏಷ್ಯಾಡ್ ನಡೆಸಿ, ಒಲಿಂಪಿಕ್ ನಡೆಸುವ ಬೂಟಾಟಿಕೆಗಳೇ ಇಂದಿರಾ ಕಾಂಗ್ರೆಸ್‌ನ ಬಂಡವಾಳವಾಗುತ್ತಿದೆ! ಅದಕ್ಕಾಗಿಯೇ ಮೂರು ರಾಜ್ಯಗಳ ಪ್ರಜ್ಞಾವಂತ ಮತದಾರರು ಇಂದಿರಾ ಕಾಂಗ್ರೆಸನ್ನು ಅಧಿಕಾರದಿಂದ ದೂರವಿರಿಸಿದ್ದಾರೆ!

ಏಷ್ಯಾಡ್‌ನ ಸತ್ಯಾಂಶಗಳೇನು? ಇದರಿಂದ ಯಾರಿಗೆ ಲಾಭವಾಯಿತು? ಎಷ್ಟು ಸಮಯ, ಸಂಪತ್ತು, ಜನಬಲ ಇದಕ್ಕೆ ವಿನಿಯೋಗವಾಯಿತು? ಕ್ರೀಡೋತ್ಸವದಿಂದ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಎಂತಹ ಪರಿಣಾಮವಾದೀತು?

ರಾಜಕೀಯ ದುರ್ಲಾಭ :

ಏಷ್ಯಾಡ್ ಭಾರತದಲ್ಲಿ ನಡೆಯುವುದು ಬೇಡ ಎಂದೂ, ಅದಕ್ಕೆ ಹಣಕಾಸು ಒದಗಿಸಲು ಬಡ ದೇಶಕ್ಕೆ ಸಾಧ್ಯವಿಲ್ಲ ಎಂದೂ 1979ರಲ್ಲಿ ಚರಣ್ ಸಿಂಗ್ ಸರಕಾರ ನಿಶ್ಚೈಸಿತ್ತು. ಆದರೆ, ಬಡವರ ಕಣ್ಣೀರು ಒರೆಸುವ ಆಶ್ವಾಸನೆ ಕೊಟ್ಟು ಜನವರಿ 1980ರಲ್ಲಿ ಪುನಃ ಅಧಿಕಾರಕ್ಕೆ ಬಂದ ಇಂದಿರಾ ಸರಕಾರದ ಮೊದಲ ನಿರ್ಣಯಗಳಲ್ಲಿ ಏಷ್ಯಾಡ್ ನಡೆಸುವುದೂ ಆಗಿತ್ತು! ಅದಕ್ಕಾಗಿ, ತತ್‌ಕ್ಷಣ ದೆಹಲಿಯಲ್ಲಿ ವಿದೇಶಿ ನೆರವಿನಿಂದ 10 ಪಂಚತಾರಾ ಹೋಟೇಲುಗಳನ್ನು ರಚಿಸಲು ಆಳುವ ಪಕ್ಷದ ಆಪ್ತರಿಗೆ ರಾಜಧಾನಿಯಲ್ಲಿ ಭಾರೀ ಅಗ್ಗದ ಬೆಲೆಯಲ್ಲಿ ಭೂಮಿ ಕೊಡಿಸಲಾಯಿತು, ಅಗ್ಗದ ಬಡ್ಡಿಯಲ್ಲಿ ರೂ. 500 ಕೋಟಿ ಸಾಲವನ್ನೂ ಕೊಡಿಸಲಾಯಿತು. ಜೊತೆಗೇ ವರ್ಣ ದೂರದರ್ಶನಗಳನ್ನು ಸುಲಭ ಸುಂಕದಲ್ಲಿ ಆಮದು ಮಾಡುವುದು. ಆಂತರಿಕ ವಿಮಾನ ಸಾರಿಗೆಯಲ್ಲಿ ಪ್ರತಿಷ್ಠಿತರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡುವುದು, ಕಾರು ಉತ್ಪಾದನೆಗೆ ಮಾರುತಿ ಮತ್ತು ಜಪಾನಿನ ಸುಜಿಕಿ ಕಂಪೆನಿಗಳೊಳಗೆ ಒಪ್ಪಂದ ಏರ್ಪಡಿಸುವುದು, ಉದಾರ ಆಮದು ನೀತಿಯನ್ನನುಸರಿಸುವುದು, ಇವುಗಳೂ ಇಂದಿರಾ ಸರಕಾರದ ಮೊದಲ ನಿರ್ಣಯಗಳಾಗಿದ್ದವು! ಬಡವರ ಪರ ಘೋಷಣೆ, ಶ್ರೀಮಂತರ ಪರ ಆಚರಣೆ, ಇದೇ ಇಂದಿರಾ ಕಾಂಗ್ರೆಸ್‌ನ ದ್ವಿಮುಖ ನೀತಿ!

ಏಷ್ಯಾಡ್ ಕ್ರೀಡೋತ್ಸವವು ಸತ್ ಸಂಪ್ರದಾಯದಂತೆ ರಾಜಕೀಯ, ಧಾರ್ಮಿಕ, ಆರ್ಥಿಕ ಒತ್ತಡವಿಲ್ಲದ ಅಂತರ ರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಪರವಾಗಿ ಭಾರತದ ಒಲಿಂಪಿಕ್ ಸಂಘವು ನಡೆಸಬೇಕಾಗಿತ್ತು. ಆದರೆ, ಏಷ್ಯಾಡ್ ಸಂಘಟಿಸುವ ಮೂಲಕ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾರತದ ಭಾವೀ ಪ್ರಧಾನಿ ಎಂದು ಪ್ರಚಾರ ಪಡೆಯುತ್ತಿರುವ ಇಂದಿರಾ ಗಾಂಧಿಯವರ ಮಗ ರಾಜೀವ ಗಾಂಧಿಯ ಪ್ರತಿಷ್ಠೆ ಹೆಚ್ಚಿಸುವ ಉದ್ದೇಶದಿಂದ, ಇಂದಿರಾ ಸರಕಾರ ಏಷ್ಯಾಡ್ ನಡೆಸಲು ರಚಿತವಾದ 17 ಸದಸ್ಯರ ಸ್ವತಂತ್ರ ಹಾಗೂ ತಜ್ಞ, ಸಮಿತಿಯನ್ನು ಬರಖಾಸ್ತುಗೊಳಿಸಿ ಕ್ರೀಡೋತ್ಸವದ ಗಂಧಗಾಳಿಯೂ ಇಲ್ಲದ 57 ಸದಸ್ಯರ ಹೊಸ ಸಮಿತಿಯನ್ನೂ, 28 ಉಪ ಸಮಿತಿಗಳನ್ನೂ ನೇಮಿಸಿತು. ಈ ಸಮಿತಿಗಳಲ್ಲಿ ಇಂದಿರಾ ಕಾಂಗ್ರೆಸ್‌ನ ಸಂಸತ್ ಸದಸ್ಯರೂ, ಪಾರ್ಟಿ ಸದಸ್ಯರೂ, ಉನ್ನತ ಅಧಿಕಾರಿಗಳೂ ತುಂಬಿ ಹೋಗಿದ್ದರು!

ಅನಿಯಂತ್ರಿತ ದುಂದು ವೆಚ್ಚ :

ಭಾರತದ ಒಲಿಂಪಿಕ್ ಸಮಿತಿಯು ಏಷ್ಯಾಡ್ ನಡೆಸಲು ರೂ. 28 ಕೋಟಿ ಖರ್ಚಾಗುವುದೆಂದೂ, ರೂ. 8 ಕೋಟಿ ಆದಾಯ ನಿರೀಕ್ಷಿಸಲಾಗಿದ್ದು, ನಿವ್ವಳ ರೂ. 20 ಕೋಟಿಯಷ್ಟೇ ಖರ್ಚಾಗುವುದೆಂದು ಅಂದಾಜು ಮಾಡಿತ್ತು. ಆದರೆ, ಇಂದಿರಾ ಕಾಂಗ್ರೆಸ್ ಕೃಪಾಪೋಷಿತ ಸಮಿತಿಯೇ ಈ ಕ್ರೀಡೋತ್ಸವವನ್ನು ನಡೆಸಿದುದರಿಂದ ಒಟ್ಟು ಖರ್ಚು ರೂ. 1000 ಕೋಟಿಗೂ ಮೀರಿರಬಹುದೆಂದು ತಿಳಿಯಲಾಗಿದೆ! ಇನ್ನೊಂದು ಸಮೀಕ್ಷೆಯಂತೆ, ಏಷ್ಯಾಡ್ ನಡೆಸಲು ಸುಮಾರು ರೂ. 1700 ಕೋಟಿ ಖರ್ಚಾಗಿದೆಯಂತೆ! ಅದಕ್ಷತೆ, ಭ್ರಷ್ಟಾಚಾರ, ಶೋಷಣೆ, ದುಂದು ವೆಚ್ಚ, ಸ್ವಜನ ಪಕ್ಷಪಾತ, ಇತ್ಯಾದಿಗಳಿಗೆ 1982ರ ಏಷ್ಯಾಡ್ ಒಂದು ಉತ್ತಮ ನಿದರ್ಶನ! ಕೆಲವು ಉದಾಹರಣೆಗಳು :

ಪಂಚತಾರಾ ಹೋಟೆಲುಗಳು :

ಏಷ್ಯಾಡ್‌ನ ನೆಪದಲ್ಲಿ 10 ಪಂಚತಾರಾ ಹೋಟೆಲುಗಳಿಗಾಗಿ ದೆಹಲಿಯಲ್ಲಿ ಇಂದಿರಾ ಕಾಂಗ್ರೆಸ್‌ನ ಆಪ್ತ 10 ಜನರಿಗೆ ಸುಲಭ ದರದಲ್ಲಿ ಬೇಕಾದ ಭೂಮಿಯನ್ನು ರೂ. 500 ಕೋಟಿ ಧನ ಸಹಾಯವನ್ನೂ ಕೊಡಲಾಯಿತು. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ದೆಹಲಿಯಲ್ಲಿ ಇನ್ನಷ್ಟು ಪಂಚತಾರಾ ಹೋಟೇಲುಗಳನ್ನು ಸ್ಥಾಪಿಸುವ ಪ್ರಸ್ತಾಪವೇ ಇರಲಿಲ್ಲ. ಇಷ್ಟಾಗಿಯೂ, ಏಷ್ಯಾಡ್ ನಡೆಯುವ ಸಮಯಕ್ಕೆ ಸರಿಯಾಗಿ ಈ ಹೋಟೇಲುಗಳ ನಿರ್ಮಾಣವಾಗಲೂ ಇಲ್ಲ, ನಿರ್ಮಾಣವಾದ ಹೋಟೇಲುಗಳು ತುಂಬುವಷ್ಟು ವಿದೇಶಗಳಿಂದ ಏಷ್ಯಾಡ್ ನೋಡಲು ಪ್ರವಾಸಿಗರೂ ಬರಲಿಲ್ಲ! ಕಾರಣ, ನಮ್ಮ ಪ್ರಚಾರಗಳೆಲ್ಲ ಪಾಶ್ಚಾತ್ಯ ದೇಶಗಳಿಗೇ ಸೀಮಿತವಾಗಿದ್ದವು. ಏಷ್ಯಾ ಹಾಗೂ ಆಫ್ರಿಕಾ ದೇಶಗಳಲ್ಲಿ ಏಷ್ಯಾಡ್ ಕುರಿತು ಪ್ರಚಾರಗಳೇ ಇರಲಿಲ್ಲ!

ಹೊಸ ಕ್ರೀಡಾಂಗಣಗಳು :

ದೆಹಲಿಯ ರಾಷ್ಟ್ರೀಯ ಕ್ರೀಡಾಂಗಣ 35000 ಪ್ರೇಕ್ಷಕರಿಗೆ ಅನುಕೂಲವಾಗಿದ್ದು, ರೂ. 2-3 ಕೋಟಿ ವೆಚ್ಚದಲ್ಲಿ 70000 ಪ್ರೇಕ್ಷಕರಿಗೆ ಸಾಕಾಗುವಂತೆ ಮಾಡುವುದು ಮೊದಲ ಯೋಜನೆಯಾಗಿತ್ತು. ಆದರೆ, ದೇಶ ವಿದೇಶಗಳ ತಜ್ಞರ ಅಭಿಪ್ರಾಯಗಳ ವಿರುದ್ಧ, ರೂ. 40 ಕೋಟಿ ವೆಚ್ಚದಲ್ಲಿ ರಾಜಘಾಟ್‌ನಲ್ಲಿ ಇಂದ್ರಪ್ರಸ್ಥ ಕ್ರೀಡಾಂಗಣವನ್ನೂ, ರೂ. 100 ಕೋಟಿ ವೆಚ್ಚದಲ್ಲಿ ನೆಹರು ಕ್ರೀಡಾಂಗಣವನ್ನೂ, ಅದಕ್ಕೆ ರಾಜಧಾನಿಯ ವಿವಿಧ ಕಡೆಗಳಿಂದ ಹೋಗಲು ರೂ. 100 ಕೋಟಿ ವೆಚ್ಚದಲ್ಲಿ ಮೇಲ್ ರಸ್ತೆಗಳನ್ನೂ (fly overs) ನಿರ್ಮಿಸಲಾಯಿತು. ಇಷ್ಟಾಗಿಯೂ, ಏಷ್ಯಾಡ್ ನೋಡಲು ದೇಶ ವಿದೇಶಗಳಿಂದ ನಿರೀಕ್ಷಿಸಿದಷ್ಟು ಪ್ರೇಕ್ಷಕರೇ ಬರಲಿಲ್ಲ! ಟಿಕೇಟುಗಳು ಹೊರಗೆ ಸಿಗುತ್ತಿರಲಿಲ್ಲ, ಒಳಗೆ ಬಹಳಷ್ಟು ಖಾಲಿ ಜಾಗಗಳು, ಎಲ್ಲವೂ ಅಸ್ತವ್ಯಸ್ಥ! ಕ್ರೀಡಾಂಗಣಗಳೊಳಗೆ ಜಾಹಿರಾತುಗಳ ಮೂಲಕ ಸಂಪಾದಿಸುವ ನಿರೀಕ್ಷೆಯೂ ವಿಫಲವಾಯಿತು. ಜಾಹಿರಾತು ಒದಗಿಸುವ ಸಂಸ್ಥೆಗೂ ಏಷ್ಯಾಡ್ ಸಂಘಟನಾ ಸಂಸ್ಥೆಗೂ ಈ ಕುರಿತು ನಡೆದ ವಾದವಿವಾದ ಅಂತರ ರಾಷ್ಟ್ರೀಯ ನ್ಯಾಯಾಲಯದಲ್ಲಿದೆ! ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಏಷ್ಯಾಡ್ ಸಂಸ್ಥೆಗಳು ಇವುಗಳಲ್ಲಿ ಒಂದಕ್ಕೊಂದು ಸಮರ್ಪಕವಾದ ಹೊಂದಾಣಿಕೆ ಇಲ್ಲದೆ ಎಲ್ಲವೂ ಗೊಂದಲ.

ಏಷ್ಯಾಡ್ ಗ್ರಾಮ :

ಏಷ್ಯಾಡ್ ಕ್ರೀಡೆಗಳಲ್ಲಿ ಸಂಬಂಧಪಟ್ಟ ನಗರದ ಮೇಯರ್‌ನಿಗೆ ಮರ್ಯಾದೆಯ ಕೆಲವು ಸ್ಥಾನಗಳಿವೆ. ದೆಹಲಿ ನಗರ ಸಭೆಯು ಬಿ.ಜೆ.ಪಿ.ಯ ಆಳ್ವಿಕೆಯಲ್ಲಿದ್ದುದರಿಂದ ಅದನ್ನು 1980ರಲ್ಲಿ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ಬರಖಾಸ್ತುಗೊಳಿಸಿತು. ಆದರೆ, ಹೊಸ ಚುನಾವಣೆ ಏಷ್ಯಾಡ್ ಮುಗಿಯುವವರೆಗೆ ನಡೆಸಲಿಲ್ಲ. ಬದಲು, ಏಷ್ಯಾಡ್‌ಗಾಗಿಯೇ ನೂರಾರು ಕೋಟಿ ವೆಚ್ಚದಲ್ಲಿ 'ಏಷ್ಯಾಡ್ ಗ್ರಾಮ' ನಿರ್ಮಾಣ. ಆ ಗ್ರಾಮದ ಮೇಯರನ್ನಾಗಿ ಕೇಂದ್ರ ಮಂತ್ರಿ ಹೆಚ್. ಎಲ್. ಭಗತ್ ಅವರ ನೇಮಕ. ದೆಹಲಿ ಮತ್ತು ಸುತ್ತುಮುತ್ತಲಿನ ಪ್ರದೇಶಗಳನ್ನು ಶೃಂಗಾರಗೊಳಿಸಿ, ಏಷ್ಯಾಡ್ ಯಶಸ್ವಿಗೊಳಿಸಿದರೆ, 1980ರಲ್ಲಿ ಅಲ್ಲಿ ನಡೆಯಲಿರುವ ಚುನಾವಣೆಗಳಲ್ಲಿ ಇಂದಿರಾ ಕಾಂಗ್ರೆಸ್ ಗೆಲ್ಲುವ ಕನಸು! ಪರಿಣಾಮ ಫೆಬ್ರವರಿ 83 ರಲ್ಲಿ ತಿಳಿದೀತು!

ವರ್ಣ ದೂರದರ್ಶನ, ಭೋಗ ಜೀವನ :

ಏಷ್ಯಾಡ್ ಖರ್ಚುಗಳೊಂದಿಗೆ, ವರ್ಣ ದೂರದರ್ಶನಗಳ ಆಮದು, ಟಿಕೇಟುಗಳ ಖರೀದಿ ಶಾಲೆ ಕಾಲೇಜುಗಳಿಗೆ ರಜೆ, ಸಾವಿರಾರು ಜನ ಪ್ರೇಕ್ಷಕರು ತಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಿದುದು, ಕ್ರೀಡಾಪಟುಗಳ ಮತ್ತು ಸಿಬ್ಬಂದಿಗಳ ಹಾಗೂ ರಕ್ಷಣಾ ಪಡೆಗಳ ಬಳಕೆ, 34 ಆನೆಗಳ ಸಾಗಾಟ, ಇತ್ಯಾದಿಗಳ ವೆಚ್ಚಗಳನ್ನೂ ಗಣನೆಗೆ ತೆಗೆದುಕೊಂಡರೆ ಬಡ ದೇಶಕ್ಕೆ ಹೊರಲಾರದ ಭಾರವಾಗಿರುವುದನ್ನು ಗಮನಿಸಬಹುದು. ವರ್ಣ ದೂರದರ್ಶನಗಳ ಆಮದಿನಿಂದ ದೇಶದ ಅಮೂಲ್ಯ ಸಂಪನ್ಮೂಲವು ಪೋಲಾಯಿತು. ಮಾರುತಿ ಕಾರು, ವರ್ಣ ದೂರದರ್ಶನ, ವಿಮಾನ ಸಾರಿಗೆಯಲ್ಲಿ ವಿಶೇಷ ಆಸನ ಉದಾರ ಆಮದು, ಇತ್ಯಾದಿ ಮೇಲ್ವರ್ಗದ ಜೀವನ ವಿಧಾನಗಳಿಂದ ಬಡ ಜನರ ಜೀವನ ವಿಧಾನಗಳ ಮೇಲೆ ಭಾರೀ ದುಷ್ಪರಿಣಾಮ ಉಂಟಾಗುವುವು. ಏಷ್ಯಾಡ್‌ನ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ವೆಚ್ಚಗಳ ಎಲ್ಲಾ ಭಾರ ಬಡ ಜನರ ಮೇಲೆಯೇ ಬೀಳುವುದು.

ಸಂಪತ್ತಿನ ಪೋಲು :

ಏಷ್ಯಾಡ್‌ನ ಕೇವಲ ಸ್ಟೇಡಿಯಂ ರಚನೆಗೇ, 8 ಕೋಟಿ ಇಟ್ಟಿಗೆ, 1 ಲಕ್ಷ ಟನ್ ಸಿಮೆಂಟ್, 91000 ಟನ್ ಉಕ್ಕು, 300 ಕಿ. ಮೀಟರ್ ವಿದ್ಯುತ್ ಮತ್ತು ಟೆಲಿಫೋನ್ ವಯರುಗಳು ಖರ್ಚಾದವು. ಏಷ್ಯಾಡ್ ಕ್ರೀಡೆ ಸಂಘಟಿಸಲು 2600 ತಾಂತ್ರಿಕ ಅಧಿಕಾರಿಗಳು, 2000 ಸಾಮಾನ್ಯ ಅಧಿಕಾರಿಗಳು, 1000 ಸಹಾಯಕರು, 2000 ಸೈನ್ಯ ಹಾಗೂ ಗಡಿ ರಕ್ಷಣಾ ಸಿಬ್ಬಂದಿಗಳು, 600 ಲ್ಯಾಸನ್ ಅಧಿಕಾರಿಗಳು ನೇಮಕಗೊಂಡಿದ್ದರು! ಏಷ್ಯಾಡ್ ಜ್ಯೋತಿ ಉರಿಸಲು ಒಂದು ಗಂಟೆಗೆ 240 ಕೆ.ಜಿ. ಗ್ಯಾಸ್ ಬೇಕಿತ್ತು!

ಪರ್ಯಾಯ ಕ್ರೀಡಾ ಯೋಜನೆ :

1982ರ ಏಷ್ಯಾಡ್‌ನಲ್ಲಿ ಭಾರತದ ಸಾಧನೆಯನ್ನು ಎಷ್ಟೇ ಹೊಗಳಿದರೂ, ಭಾರತ ಕ್ರೀಡಾ ಕ್ಷೇತ್ರದಲ್ಲಿ ವಿಶ್ವದ ಹಲವು ಪುಟ್ಟ ರಾಷ್ಟ್ರಗಳಿಗಿಂತಲೂ ಬಹಳ ಹಿಂದುಳಿದಿರುವುದನ್ನು ಮರೆಯಲಾಗದು. ಕಳೆದ ಏಷ್ಯಾಡ್‌ನಲ್ಲಿಯೂ ಭಾರತ 57 ಪದಕಗಳನ್ನು ಪಡೆದಿದ್ದರೆ, ಚೀನಾ ಮತ್ತು ಜಪಾನು ತಲಾ 153 ಪದಗಳನ್ನು ಪಡೆದು ಪ್ರಥಮ ಹಾಗೂ ದ್ವಿತೀಯ ಸ್ಥಾನಗಳಿಸಿದ್ದವು. ದ. ಕೊರಿಯಾ 93 ಪದಕಗಳನ್ನು ಪಡೆದು ಮೂರನೇ ಸ್ಥಾನ ಗಳಿಸಿದ್ದು, ಉ. ಕೋರಿಯಾ ನಾಲ್ಕನೇ ಸ್ಥಾನಗಳಿಸಿತ್ತು. ಅಕ್ಟೋಬರ್ 82ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ 18 ಕಾಮನ್‌ವೆಲ್ತ್ ರಾಷ್ಟ್ರಗಳ ಕ್ರೀಡೋತ್ಸವದಲ್ಲಿ ಭಾರತ 12ನೇ ಸ್ಥಾನಗಳಿಸಿ ಹಿಂದುಳಿದಿತ್ತು. 1980ರ ಮಾಸ್ಕೋ ಒಲಿಂಪಿಕ್‌ದಲ್ಲಿ ಪದಕಗಳಿಸಿದ 24 ದೇಶಗಳಲ್ಲಿ ಭಾರತ 23ನೇ ಸ್ಥಾನ ಪಡೆದಿತ್ತು. ಆದರೆ, ಸೋವಿಯತ್ ಯೂನಿಯನ್, ಪೂ.ಜರ್ಮನಿ, ಬಲ್ಗೇರಿಯಾ, ಕ್ಯೂಬಾ, ಹಂಗೇರಿ, ರೊಮೇನಿಯಾ ಅನುಕ್ರಮವಾಗಿ ಒಂದರಿಂದ ಆರನೇ ಸ್ಥಾನದಲ್ಲಿದ್ದವು. ಈ ಆರೂ ದೇಶಗಳು ಸಮಾಜವಾದಿಯಾಗಿದ್ದು, ಕ್ರೀಡಾ ಕ್ಷೇತ್ರಗಳಲ್ಲಿಯೂ ಅವುಗಳ ಹಿರಿಮೆಯನ್ನು ಮೆರೆಯಿಸಿವೆ!

(7ನೇ ಪುಟನೋಡಿ)

ಮಾರ್ಕ್ಸ್ ಮರಣಶತಾಬ್ಧಿ ಲೇಖನ ಮಾಲೆ

ಲೇಖನಾಂಕ – 1

ಚಾರಿತ್ರಿಕವಾಗಿ 'ಮಾರ್ಕ್ಸ್‌ವಾದ'

ಮಾರ್ಕ್ಸ್‌ವಾದವೆಂದರೆ ಕಾರ್ಮಿಕ ವರ್ಗದ ಲೋಕ ಕಣ್ಣೋಟ. ಸಮಾಜವಾದವನ್ನು ಸ್ಥಾಪಿಸಲು ಸಾಮರ್ಥ್ಯವುಳ್ಳ ಏಕಮಾತ್ರ ವರ್ಗ ಹಾಗೂ ಅತ್ಯಾಧುನಿಕ ಕ್ರಾಂತಿಕಾರೀ ವರ್ಗವಾದ ಕಾರ್ಮಿಕ ವರ್ಗವು ಲೋಕವನ್ನು, ಲೋಕದ ಆಗುಹೋಗುಗಳನ್ನು ನೋಡುವ ಕಣ್ಣೋಟವೇ ಮಾರ್ಕ್ಸ್‌ವಾದ.

ಈ ಕಣ್ಣೋಟದಿಂದ ಲೋಕದ ಚಲನವಲನಗಳನ್ನೂ ಚರಿತ್ರೆಯನ್ನೂ ನೋಡಿದಾಗ ಲೋಕವು ನಿರಂತರವಾಗಿ ಬದಲಾಗುತ್ತಾ ಬಂದಿದೆಯೆಂದು ಕಾಣುವುದು. ಈ ಬದಲಾವಣೆಯು ವಿಕಾಸಾತ್ಮಕವಾಗಿಯೂ ಕ್ರಾಂತಿಕಾರಿಯಾಗಿಯೂ ನಡೆಯುವುದು. ಪರಿಮಾಣಾತ್ಮಕ, ಕ್ರಮಬದ್ಧ ಪರಿವರ್ತನೆಗಳು ಅನಿವಾರ್ಯವಾಗಿ ಗುಣಾತ್ಮಕ, ಮೂಲಭೂತ ಪರಿವರ್ತನೆಗಳಿಗೆ ಮಾರ್ಗಮಾಡಿಕೊಡುತ್ತದೆ. ಪರಸ್ಪರ ವಿರೋಧಾತ್ಮಕ ಅಂಶಗಳ ನಡುವಿನ ಐಕ್ಯತೆ ಮತ್ತು ಘರ್ಷಣೆಯೇ ಚಲನೆಗೆ, ಬದಲಾವಣೆಗೆ, ಪ್ರಗತಿಗೆ, ಮುನ್ನಡೆಗೆ ಕಾರಣವಾಗಿದೆ.

ಈ ಐಕ್ಯತೆ ಮತ್ತು ಘರ್ಷಣೆಯು ಮನುಷ್ಯನ ಮತ್ತು ಪ್ರಕೃತಿಗಳ ನಡುವಿನ ಘರ್ಷಣೆಯಾಗಿ ವಿಜ್ಞಾನದ ಬೆಳವಣಿಗೆಗೆ ಕಾರಣವಾಯಿತು. ಪ್ರಕೃತಿಯ ಮೇಲಿನ ಮನುಷ್ಯನ ನಿಯಂತ್ರಣ ಹೆಚ್ಚುವುದಕ್ಕೆ ಕಾರಣವಾಯಿತು.

ಈ ಐಕ್ಯತೆ ಮತ್ತು ಘರ್ಷಣೆಯು ಮನುಷ್ಯ ಮನುಷ್ಯರ ನಡುವಿನ ಘರ್ಷಣೆಯಾಗಿ ವರ್ಗ ಹೋರಾಟಗಳಿಗೆ ಕಾರಣವಾಯಿತು. ಸಮಾಜದ ಆರ್ಥಿಕ-ಸಾಮಾಜಿಕ ವ್ಯವಸ್ಥೆಗಳಲ್ಲಿ ಮೂಲ ಬದಲಾವಣೆಗೆ ಕಾರಣವಾಯಿತು.

ಮಾರ್ಕ್ಸ್ ಮತ್ತು ಎಂಗೆಲ್ಸರು ತಮ್ಮ ದ್ವಂದ್ವಮಾನ ಭೌತಿಕವಾದದ ತತ್ವದ ಕಣ್ಣೋಟದಲ್ಲಿ ವೀಕ್ಷಿಸಿ ಯುರೋಪ್ ಮತ್ತು ಅಮೇರಿಕಾದಲ್ಲಿ ಅಂದು ನಡೆಯುತ್ತಿದ್ದ ಕಾರ್ಮಿಕ ಚಳವಳಿಗೆ ಮಾರ್ಗದರ್ಶನವೀಯುತ್ತಿದ್ದರು. ಯುರೋಪಿನ ಹಲವಾರು ...ಂತಿಕಾರಿ ಪರಿಸ್ಥಿತಿಗಳಲ್ಲಿ ಕಾರ್ಮಿಕ ...ಂದಾಳುಗಳು ಹೇಗೆ ವರ್ತಿಸಬೇ...ನು ಮಾರ್ಗದರ್ಶನ ಮಾಡಿದರು.

ಜರ್ಮನ್, ಇಟಲಿ, ಫ್ರಾನ್ಸ್, ಬೆಲ್ಜಿಯಂ ಮೊದಲಾದ ರಾಜ್ಯಗಳ ಕಾರ್ಮಿಕ ವರ್ಗಗಳಿಗೆ ತಮ್ಮ ಅಧಿಕಾರ ಸ್ಥಾಪಿಸಲು ಕ್ರಾಂತಿಸಾಧಕ ಕಾರ್ಯಕ್ರಮವನ್ನು ಸರಿಯಾಗಿ ರೂಪಿಸಲು ಸಹಾಯ ಮಾಡಿದರು.

ಆಯಾಯ ದೇಶದ ಆಯಾಯ ಕಾಲದ ವಿಶಿಷ್ಟ ಪರಿಸ್ಥಿತಿಗನುಗುಣವಾಗಿ ಪ್ರಾಯೋಗಿಕ ರಾಜತಂತ್ರಗಳನ್ನು ಕಾರ್ಮಿಕ ವರ್ಗದ ರಾಜಕೀಯ ಪಾರ್ಟಿಯು ಅನುಸರಿಸಬೇಕೆಂದು ಮಾರ್ಕ್ಸ್ ಮತ್ತು ಎಂಗೆಲ್ಸರು ಸಲಹೆ ಕೊಟ್ಟರು. ಅದೇ ವೇಳೆಯಲ್ಲಿ ದ್ವಂದ್ವಮಾನ ಭೌತಿಕವಾದದ ತತ್ವದಲ್ಲಿ— ಮಾರ್ಕ್ಸ್‌ವಾದಿ ತತ್ವದಲ್ಲಿ ಯಾವೊಂದೂ ಕಲಬೆರಕೆ ಮಾಡಬಾರದೆಂದೂ ಅವರು ಎಚ್ಚರಿಸಿದರು. ಇಂಗ್ಲೆಂಡಿನಲ್ಲಾಗಲೀ, ಜರ್ಮನಿಯಲ್ಲಾಗಲೀ, ಫ್ರಾನ್ಸ್‌ನಲ್ಲಾಗಲೀ, ಇಟಲಿಯಲ್ಲಾಗಲೀ, ಅಮೇರಿಕಾದಲ್ಲಾಗಲೀ, ಯಾವ ಕಾರ್ಮಿಕ ಧುರೀಣರೇ ಆಗಲೀ, ಕಾರ್ಮಿಕ ವರ್ಗದ ಯಾವುದೇ ರಾಜಕೀಯ ಪಾರ್ಟಿಯಾಗಲೀ, ಬಂಡವಾಳಶಾಹಿ ವರ್ಗದ ಬಂಡವಾಳಶಾಹಿ ಸಾಮಂತವಾದಿ ತತ್ವಗಳ ಪ್ರಭಾವಕ್ಕೆ ಒಳಗಾಗಿ ಗೊತ್ತಿದ್ದಾಗಲೀ ಗೊತ್ತಿಲ್ಲದೆಯಾಗಲೀ, ಮಾರ್ಕ್ಸ್‌ವಾದಿ ಪಥವನ್ನು ಬಿಟ್ಟುಹೋದಾಗ ಆ ಧುರೀಣರನ್ನೂ, ಕಾರ್ಮಿಕ ಪಾರ್ಟಿಗಳನ್ನೂ ಕಟುವಾಗಿ ಟೀಕಿಸಲು ಮಾರ್ಕ್ಸ್ ಮತ್ತು ಎಂಗೆಲ್ಸರು ಹಿಂಜರಿಯಲಿಲ್ಲ.

ಜರ್ಮನ್ ಪಾರ್ಟಿಯ ಗೋಥಾ ಕಾರ್ಯಕ್ರಮದ ಕಟು ಟೀಕೆಯೇ ಇದಕ್ಕೆ ಸಾಕ್ಷಿ.

1ನೇ ಮತ್ತು 2ನೇ ಕಾರ್ಮಿಕ ಅಂತರರಾಷ್ಟ್ರೀಯಗಳ ಕಾರ್ಯಕಲಾಪಗಳನ್ನು ಪರಿಶೀಲಿಸಿದರೆ, 19ನೇ ಶತಮಾನದ ಉತ್ತರಾರ್ಧದಲ್ಲಿ ಮಾರ್ಕ್ಸ್—ಎಂಗೆಲ್ಸರು ಆಗಿನ ಕಾಲದ ಕಾರ್ಮಿಕ ಮುಂದಾಳುಗಳೊಡನೆ ನಡೆಸಿದ ವಿಪುಲವಾದ "ಪತ್ರ ವ್ಯವಹಾರ"ಗಳು ಮಾರ್ಕ್ಸ್ ಮತ್ತು ಎಂಗೆಲ್ಸರು ಹೇಗೆ "ದ್ವಂದ್ವಮಾನ ಭೌತಿಕವಾದ"ವನ್ನು ಕಾರ್ಮಿಕ ವರ್ಗದ ಕ್ರಾಂತಿಕಾರಿ ಹೋರಾಟದ ದಿಕ್‌ಚಕ್ರವನ್ನಾಗಿ ಬೆಳೆಸಿದರೆಂದೂ ಅದೇವೇಳೆ ಎಂತಹ ಸಂದರ್ಭ ಸನ್ನಿವೇಶದಲ್ಲೂ ಕಾರ್ಮಿಕ ವರ್ಗದ ರಾಜಕೀಯ ಮುಂದಾಳುಗಳು ಕಾರ್ಮಿಕ ವರ್ಗದ ಚಳವಳಿಯನ್ನು ಕ್ರಾಂತಿಪಥದಲ್ಲಿ ಮುಂದುವರಿಸಿಕೊಂಡು ಹೋಗಲು ತಕ್ಕ ಪ್ರಾಯೋಗಿಕ ತಂತ್ರಗಳನ್ನು ಅನುಸರಿಸಲು ಸಾಧ್ಯವೆಂದೂ ತೋರಿಸಿ ಕೊಟ್ಟರು.

ಮಾರ್ಕ್ಸ್‌ವಾದವು ಕುರುಡು ತತ್ವವಲ್ಲ.

ಮಾರ್ಕ್ಸ್‌ವಾದವು ಪುಸ್ತಕದ ಬದನೆಕಾಯಿಯಲ್ಲ.

ಪ್ರಾಯೋಗಿಕವಾಗಿ ಕಾರ್ಮಿಕ ವರ್ಗಕ್ಕೆ ಜಗತ್ತಿನಲ್ಲಿ ಅತ್ಯಂತ ಮೇಲ್ಪಟ್ಟದ ಪ್ರಜಾಪ್ರಭುತ್ವ ಚಳವಳಿಯನ್ನು ನಡೆಸುವುದಕ್ಕೆ ಮತ್ತು ಕಾರ್ಮಿಕ ವರ್ಗವು ಕ್ರಾಂತಿ ಸಾಧಿಸುವುದಕ್ಕೆ ದಾರಿ ತೋರಿಸುವ ಕ್ರಾಂತಿಕಾರಕ ತತ್ವವಾಗಿದೆ.

ಪ್ರಯೋಗವೇ ಈ ತತ್ವದ ಅಡಿಪಾಯ.

ಪ್ರಯೋಗದಿಂದಲೇ ಈ ತತ್ವದ ಬೆಳವಣಿಗೆ ಸಾಧ್ಯ.

2ನೇ ಅಂತರರಾಷ್ಟ್ರೀಯದ ಮುಂದಾಳುಗಳು ಬಂಡವಾಳಶಾಹಿ, ಪುಟ್ಟ ಬಂಡವಾಳಶಾಹಿ ಪ್ರಭಾವಗಳಿಗೊಳಗಾಗಿ ಮಾರ್ಕ್ಸ್‌ವಾದದ "ಕ್ರಾಂತಿಕಾರಿ ಅಂಶಗಳ"ನ್ನು ಮರೆತು ನಡೆಯಲಾರಂಭಿಸಿದರು. ಮಾರ್ಕ್ಸ್‌ವಾದದ ಸುಧಾರಣೆ ಮಾಡುವುದಕ್ಕೆ ಆರಂಭ ಮಾಡಿದರು.

ಪರಿಣಾಮವಾಗಿ ಈ 2ನೇ ಅಂತರರಾಷ್ಟ್ರೀಯ ಮುಂದಾಳುಗಳಿಂದ ಎಲ್ಲಿಯೂ ಕ್ರಾಂತಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಮಾರ್ಕ್ಸ್ ಮತ್ತು ಎಂಗೆಲ್ಸರು ತಮ್ಮ ಆಗಿನ ಅನುಭವದ ಆಧಾರದಲ್ಲಿ ಅಂದಾಜು ಮಾಡಿದ ಕ್ರಾಂತಿಗಳು ಕೂಡಾ – ಜರ್ಮನಿ, ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿ– ಅಲ್ಲಿನ ಕಾರ್ಮಿಕವರ್ಗದ "ಸುಧಾರಣಾ" ಕಾರ್ಯಕ್ರಮಗಳ ಪರಿಣಾಮವಾಗಿ, 'ಪಾರ್ಲಿಮೆಂಟರಿ ಶಾಂತ ವಿಧಾನ'ದ ಅನುಸರಣೆಯ ಫಲವಾಗಿ-ಆ ಕ್ರಾಂತಿಗಳು ಸಾಧಿತವಾಗಲಿಲ್ಲ.

ವಸ್ತುಸ್ಥಿತಿಯನ್ನು ದ್ವಂದ್ವಮಾನ ಭೌತಿಕವಾದೀ ದೃಷ್ಟಿಕೋಣದಿಂದ ಸರಿಯಾಗಿ ಅಂದಾಜುಮಾಡಿ, ಕಾರ್ಯಕ್ರಮ ಹಾಕಿ, ಸಂಘಟನೆ ಬೆಳೆಸಿ ವಿಶಾಲ ಪ್ರಮಾಣದ ಜನತಾ ಚಳವಳಿಗಳನ್ನು ನಡೆಸಿ ಲೆನಿನರು ರಷ್ಯಾದಲ್ಲಿ ಕಾರ್ಮಿಕ ವರ್ಗದ ಕ್ರಾಂತಿಯನ್ನು ನಡೆಸಿದರು.

ಲೆನಿನರು ನಡೆಸಿದ ಕ್ರಾಂತಿಯ ಕುರಿತು ಒಂದು ಸೂಕ್ಷ್ಮ ಪರಿಶೀಲನೆಯನ್ನು ನಡೆಸೋಣ.

1890ರ ಮೊದಲು : ರಷ್ಯಾದಲ್ಲಿ 1860 ರಿಂದೀಚೆಗಿಂದಲೇ ಬಂಡವಾಳಶಾಹೀ ಆರ್ಥಿಕವು ರಷ್ಯಾದ ಸಾಮಂತವಾದೀ ಆರ್ಥಿಕ ವ್ಯವಸ್ಥೆಯ ಗರ್ಭದಲ್ಲಿ ಬೆಳೆಯುತ್ತಾ ಬಂದಿತ್ತು. ಯುರೋಪಿನ ಅತ್ಯಂತ ದೊಡ್ಡ ಮಿಲಿಟರಿ ಶಕ್ತಿಯಾಗಿದ್ದ ಜ್ಹಾರ್‌ಶಾಹಿಯು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಮಿಲಿಟರಿಗೆ ವಸ್ತು-ಸಾಮಗ್ರಿಗಳನ್ನು ಒದಗಿಸಬೇಕಾಯಿತು. ಅಲ್ಲದೆ ಯುರೋಪಿನ ರಾಜ್ಯಗಳ ಸಂಪರ್ಕ ಬೆಳೆದು ವ್ಯಾಪಾರ ವಹಿವಾಟುಗಳು ಹಿಂದೆ ಯಾವ ಕಾಲದಲ್ಲಿಲ್ಲದಷ್ಟು ಅಧಿಕ ಪ್ರಮಾಣದಲ್ಲಿ ಬೆಳೆಯಿತು. ಯುರೋಪಿನ ಇತರ ರಾಜ್ಯಗಳಲ್ಲಿ ಕೈಗಾರಿಕೆಗಳು ಬೆಳೆದಂತೆ ರಷ್ಯಾದಲ್ಲೂ ಕೈಗಾರಿಕೆಗಳು ಬೆಳೆಯಲಾರಂಭಿಸಿದವು. ಫ್ರಾನ್ಸ್ ಮತ್ತು ಇಂಗ್ಲೆಂಡಿನ ಬಂಡವಾಳಗಾರರೂ ಅಲ್ಲಿ ಬಂಡವಾಳವನ್ನು ಈ ಕೆಲವು ಅಂಕೆ ಸಂಖ್ಯೆ ಹಾಕಿ ಹಲವು ಘನ ಕೈಗಾರಿಕೆಗಳನ್ನು ನಡೆಸುತ್ತಾ ಬಂದರು. ಕಾರ್ಮಿಕರ ಸಂಖ್ಯೆ ಮಿಲಿಯದ ಗಡಿದಾಟಿತು. ಕಾರ್ಮಿಕರ ಮಧ್ಯೆ ಟ್ರೇಡ್ ಯೂನಿಯನ್ ಬೆಳೆದು ಕಾರ್ಮಿಕರ ಮುಷ್ಕರಗಳು ನಡೆದವು. ಮುಷ್ಕರಗಳನ್ನು ದಬ್ಬಾಳಿಕೆಯಿಂದ ಬಗ್ಗು ಬಡಿಯಲು ಜ್ಹಾರ್ ಶಾಹೀ ನೋಡಿದಂತೆ ಕಾರ್ಮಿಕರ ಜ್ಹಾರ್ ವಿರೋಧಿ ಮನೋಭಾವವೂ ಬೆಳೆಯಿತು.

ಈ ಕೈಗಾರಿಕಾ ಬೆಳವಣಿಗೆಯ ಪರಿಣಾಮವಾಗಿ ಎರಡು ಮುಖ್ಯ ಒತ್ತಡಗಳು ರಷ್ಯಾದ ಸಮಾಜದಲ್ಲಿ ಉಂಟಾದವು; ಒಂದನೇಯದಾಗಿ, ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹ ಸಿಕ್ಕಿತು. ರಷ್ಯಾದ ಯುನಿವರ್ಸಿಟಿಗಳಲ್ಲಿ "ಮಾನವತಾ ವಿಷಯಗಳ ಜತೆಯಲ್ಲಿ ವಿಜ್ಞಾನದ ವಿಷಯಗಳ" ಪಠನ, ಅಭ್ಯಾಸ, ಸಂಶೋಧನೆಗೆ ಅವಕಾಶ ಸಿಕ್ಕಿತು. ಕಲಿತವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಿತು. ಬುದ್ಧಿಜೀವಿಗಳ ಮಧ್ಯೆ "ವಿಜ್ಞಾನ ಮತ್ತು ಮತ''ಗಳ ನಡುವಿನ ಚರ್ಚೆ ತೀವ್ರವಾಗಿ ನಡೆದು ಹಳೆಯ ಗೊಡ್ಡು ಮತದ ಅಂಥ ಅಭಿಪ್ರಾಯಗಳ ಮೇಲೆ ತೀವ್ರ ದಾಳಿ ನಡೆಯಿತು. ಕಲೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಹೊಸ ಚೇತನ ಹುಟ್ಟಿತು. ಹಳೆಯ ಸಂಪ್ರದಾಯಿಕ ಅಭಿಪ್ರಾಯಗಳಿಗೆ ಬುದ್ಧಿಜೀವಿಗಳು ಹೆಚ್ಚೆಚ್ಚಾಗಿ ತಿಲಾಂಜಲಿ ಕೊಟ್ಟು ಹೊಸ ವಿಕಾಸಾತ್ಮಕ ಭೌತಿಕ ಅಭಿಪ್ರಾಯಗಳನ್ನು ತಾಳಿದರು. ಎರಡನೇಯದಾಗಿ, ಪಾಳೆಯಗಾರಿ ಸಂಬಂಧಗಳು ಸಮಾಜದ ಬೆಳವಣಿಗೆಗೆ ಹೆಚ್ಚೆಚ್ಚಾಗಿ ಅಡಿಯಾಗಿದೆ; ಹಳೆಯ "ಭೂದಾಸ್ಯ ಪದ್ಧತಿ"ಯಲ್ಲಿ ತೀವ್ರ ಬದಲಾವಣೆಯಾಗಲೇಬೇಕು; ಇಲ್ಲವಾದರೆ ರಷ್ಯಾದ ಪ್ರಗತಿ ಯುರೋಪಿನ ಇತರ ರಾಜ್ಯಗಳ ಪ್ರಗತಿಗಿಂತ ಶತಮಾನ ಶತಮಾನದಷ್ಟು ಹಿಂದೆ ಬೀಳುವುದು.... ಎಂಬ ಅಭಿಮತವು ಹೆಚ್ಚೆಚ್ಚು ಪ್ರಚಾರವಾಗಲು ಆರಂಭವಾಯಿತು.

ಆದ ಕಾರಣ....ಜ್ಹಾರ್‌ಶಾಹಿಯೇ ಹಳೆಯ "ಭೂ-ದಾಸ್ಯ ಪದ್ಧತಿ''ಯನ್ನು ರದ್ದುಗೊಳಿಸಿ "ಭೂದಾಸರಿಗೆ ಹಲವು ರೀತಿಯ ಸವಲತ್ತುಗಳನ್ನು ಕೊಡುವ'' ಭೂಸಂಬಂಧಗಳನ್ನು ಸಾರುವ ಕಾನೂನನ್ನು ಸಾರಿತು. ಆದರೆ, ಜ್ಹಾರ್‌ಶಾಹೀ ಆಡಳಿತ ಯಂತ್ರವು ಮಾತ್ರ ಈ ಕಾನೂನನ್ನು ಪೂರ್ತಿಯಾಗಿ ಜ್ಯಾರಿಗೆ ತರಲಿಲ್ಲ. ಅಲ್ಲದೆ ಸಾಮಂತವಾದಿಗಳ ಹಿತಗಳಿಗೆ ಈ ಕಾನೂನಿನಿಂದ ಬಾಧಕವಾದುದರಿಂದ ಅವರು ಕಾನೂನು ಜ್ಯಾರಿಯಾಗುವುದನ್ನು ವಿರೋಧಿಸಿದರು. ರಷ್ಯಾದ ಚರ್ಚ್ ಕೂಡ ಈ ಬದಲಾವಣೆಯನ್ನು ವಿರೋಧಿಸಿತು.

ಹೀಗೆ 1860-1890ರ ವರೆಗಿನ ರಷ್ಯದ ಸಮಾಜದಲ್ಲಿ ಒಂದೆಡೆ ಕೈಗಾರಿಕೆಗಳು ಬೆಳೆಯುತ್ತಾ ಬಂದು ಬಲಿಷ್ಟ ಕಾರ್ಮಿಕ ವರ್ಗವು ಸೃಷ್ಟಿಯಾಯಿತು: ಇನ್ನೊಂದೆಡೆ ಬುದ್ಧಿಜೀವಿಗಳು ಹೆಚ್ಚೆಚ್ಚಾಗಿ ವೈಜ್ಞಾನಿಕ ವಿಚಾರಧಾರೆಯನ್ನು ಅನುಸರಿಸುತ್ತಾ ಬಂದು ಉಸಿರು ಕಟ್ಟುವಂತಹ ಜ್ಹಾರ್‌ಶಾಹಿ ಸಾಮಂತವಾದಿ ಆರ್ಥಿಕ-ಸಾಮಾಜಿಕ ಚೌಕಟ್ಟಿನಿಂದ ರಷ್ಯಾದ ಸಮಾಜವನ್ನು ಹೊರತರುವ ದಿಕ್ಕಿನಲ್ಲಿ ಯೋಚಿಸಲಾರಂಭಿಸಿದರು.

ಇಂತಹ ರಷ್ಯಾದ ವಾತಾವರಣದಲ್ಲಿ ಲೆನಿನರು ಹುಟ್ಟಿ ವಿದ್ಯಾರ್ಥಿಯಾಗಿ ಬೆಳೆದರು.

1890 ರಿಂದ 1903ರ ವರೆಗೆ

ರಷ್ಯಾದ ಮುಖ್ಯ ಮುಖ್ಯ ನಗರಗಳಲ್ಲಿ ವಿದ್ಯಾರ್ಥಿಗಳೂ, ಪ್ರೊಫೆಸರರುಗಳೂ ಹಲವು ಇತರ ಬುದ್ಧಿಜೀವಿಗಳೂ ಸೇರಿ "ಅಭ್ಯಾಸ ಕೂಟ"ಗಳನ್ನು ರಚಿಸಿಕೊಂಡಿದ್ದರು. ಈ ಕೂಟಗಳಲ್ಲಿ ಜ್ಹಾರ್‌ಶಾಹಿ ನಿರ್ಮೂಲನಕ್ಕೆ ರಷ್ಯದ ಜನತೆ ಯಾವ ಹಾದಿ ಅನುಸರಿಸಬೇಕೆಂಬುದರ ಕುರಿತು ತೀವ್ರ ಚರ್ಚೆ ನಡೆಯುತ್ತಿತ್ತು. ಒಂದೇ "ಅಭ್ಯಾಸ ಕೂಟ"ದಲ್ಲಿ ಹಲವು ಗುಂಪುಗಳಿದ್ದವು. ಒಂದೇ ನಗರದಲ್ಲಿ ಹಲವು ಗುಂಪುಗಳಿದ್ದವು. ರಷ್ಯದ ಕ್ರಾಂತಿಕಾರಿಗಳು ಈ ಒಂದಲ್ಲ ಒಂದು ಕೂಟದ, ಒಂದಲ್ಲ ಒಂದು ಗುಂಪಿನ ಸದಸ್ಯರಾಗಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಲೆನಿನರು ಪೆಟ್ರೋಗ್ರೇಡ್ ನಗರದ ಒಂದು ಮುಖ್ಯ ಸರ್ಕಲಿನ ಒಬ್ಬ ಸದಸ್ಯರಾದರು.

ಆಗ "ನೆರೋಡಿಸಂ'' ತತ್ವವು ಸಾರ್ವತ್ರಿಕವಾಗಿ ಹರಡಿತ್ತು. ತತ್ವದ ಮುಖ್ಯ ಅಂಶಗಳು ಹೀಗಿದ್ದುವು: ರಷ್ಯಾವು ಕೃಷಿ ಪ್ರಧಾನವಾದ ದೇಶ. ನೂರರಲ್ಲಿ 75 ಮಂದಿ ಭೂ-ದಾಸರು. ದಾಮಾಶಯ ಪ್ರಕಾರ ಕಾರ್ಮಿಕರ ಸಂಖ್ಯೆ ಕಡಿಮೆ ಆದ ಕಾರಣ ಕ್ರಾಂತಿ ನಡೆಯುವುದು ಈ ಭೂದಾಸರ ನೇತೃತ್ವದಲ್ಲಿ ವಿನಹ ಕಾರ್ಮಿಕರ ನೇತೃತ್ವದಲ್ಲಿ ನಡೆಯುವುದಲ್ಲ. ಈ ಭೂ-ದಾಸರು ಒಂದು ಜಡವಾದ ಜನಸಮೂಹ. ಕ್ರಾಂತಿಕಾರಿಗಳೆಂಬವರು ಸಕ್ರಿಯವಾಗಿ ವರ್ತಿಸಿ ಅವರ ''ಮಹಾಮುಖಂಡರು''ಗಳಾಗಿ ಜ್ಹಾರ್‌ಶಾಹಿಯ ಮುಖ್ಯಸ್ಥರನ್ನು ಅಲ್ಲಲ್ಲಿ ಕೊಲೆಗೈಯಬೇಕು. ಅಗ ಜ್ಹಾರ್‌ಶಾಹಿಯು ಸಂಪೂರ್ಣವಾಗಿ ಕುಸಿದು ಬೀಳುವುದು.

ನಡೆದು ಬಂದ ದಾರಿ

—ಕಾಂ. ಪಿ. ರಾಮಚಂದ್ರರಾವ್

ರಷ್ಯಾದಲ್ಲಿ, ಯುರೋಪಿನ ಇತರ ದೇಶಗಳಲ್ಲಿ ಬೆಳೆದಂತೆ ಬಂಡವಾಳಶಾಹಿ ಪದ್ಧತಿ ಬೆಳೆಯಲು ಸಾಧ್ಯವಿಲ್ಲ, ಬೆಳೆಯುವುದಿಲ್ಲ.

ಆದ ಕಾರಣ ರಷ್ಯಾದಲ್ಲಿ ಮುಖ್ಯವಾಗಿ ಯುವಕ ಜನಾಂಗದ ಮಧ್ಯೆ ಈ ನೆರೋಡ್ನಿಕ್ ಮಹಾಮುಖಂಡರ "ಕೊಲೆ ಕಾರ್ಯಕ್ರಮ"ವು ನೆಲೆನಿಂತಿತ್ತು. ಇಂತಹ ಗುಂಪುಗಳು ರಷ್ಯದಾದ್ಯಂತ ಕೆಲಸ ಮಾಡುತ್ತಿದ್ದುವು. ಲೆನಿನರ ಅಣ್ಣನೂ ಜ್ಹಾರ್‌ನೊಬ್ಬನ ಕೊಲೆಯ ಯತ್ನದಲ್ಲಿ ಸಿಲುಕಿ ಬಿದ್ದು ಗಲ್ಲಿಗೇರಿಸಲ್ಪಟ್ಟನು.

ಅಣ್ಣನ ಮೇಲೆ ಲೆನಿನರಿಗೆ ತುಂಬಾ ಗೌರವ ಇದ್ದರೂ ಅಣ್ಣನು ಅನುಸರಿಸುವ ದಾರಿ 'ಸರಿಯಾದ' ದಾರಿಯಲ್ಲವೆಂಬುದರ ಬಗ್ಗೆ ಲೆನಿನರಿಗೆ ಮೊದಲಿನಿಂದಲೇ ಖಚಿತವಿತ್ತು.

ರಷ್ಯಾದಲ್ಲಿ ಮಾರ್ಕ್ಸ್ ಸಾಹಿತ್ಯದ ಹಲವಾರು ಪುಸ್ತಕಗಳು ರಷ್ಯನ್ ಭಾಷೆಗೆ ತರ್ಜುಮೆಯಾಗಿದ್ದುದರಿಂದಲೂ, ಪ್ಲೆಕೊನೋವ್ ಮೊದಲಾದ ಮೇಧಾವಿಗಳು ರಷ್ಯನ್ ಭಾಷೆಯಲ್ಲೆ ಮಾರ್ಕ್ಸಿಸ್ಟ್ ತತ್ವವನ್ನು ವಿವರಿಸುವ ಗ್ರಂಥಗಳನ್ನು ಬರೆದು ಪ್ರಚಾರಗೊಳಿಸಿದುದರಿಂದಲೂ, ನೆರೊಡ್ನಿಸಂ ತತ್ವವನ್ನು ಮೂಲಭೂತವಾಗಿ ವಿರೋಧಿಸುವ ತತ್ವ ಮಾರ್ಕ್ಸ್‌ವಾದವಾದುದರಿಂದಲೂ ಲೆನಿನರು ಮಾರ್ಕ್ಸ್‌ವಾದದ ಆಕರ್ಷಿತರಾದರು. "ಅಭ್ಯಾಸ ಕೂಟಗಳಲ್ಲೂ", ಸ್ವತಂತ್ರ ಅಭ್ಯಾಸ ಬಲದಿಂದಲೂ ಮಾರ್ಕ್ಸ್‌ವಾದದ ಅಭ್ಯಾಸವನ್ನು ಲೆನಿನರು ಚೆನ್ನಾಗಿಯೇ ಮಾಡಿದರು.

ವಿದ್ಯಾರ್ಥಿ ಚಳವಳಿಗಳನ್ನು ನಡೆಸುವುದರ ಬಗ್ಗೆ ಅವರನ್ನು ಗಡೀಪಾರು ಮಾಡಲಾಯಿತು. ಸೈಬೀರಿಯಾದಲ್ಲಿ ಲೆನಿನರು "ರಷ್ಯಾದಲ್ಲಿ ಬಂಡವಾಳಶಾಹೀ ಆರ್ಥಿಕ ವ್ಯವಸ್ಥೆಯ ಬೆಳವಣಿಗೆ"ಯೆಂಬ ಅತ್ಯಂತ ವಿಪುಲ ಅಂಕೆ ಸಂಖ್ಯೆಗಳನ್ನು "ರಷ್ಯಾದಲ್ಲಿ ಬಂಡವಾಳಶಾಹೀ ಆರ್ಥಿಕವು ಬೆಳೆಯಲು ಸಾಧ್ಯವೇ ಇಲ್ಲ" ಎಂಬ ನೆರೋಡ್ನಿಕರ ವಾದದ ಬುಡವನ್ನೇ ಕತ್ತರಿಸಿ ಹಾಕಿದರು. ಜ್ಹಾರ್‌ಶಾಹಿಯ ವಿಶೇಷ ದಬ್ಬಾಳಿಕೆಯ ಕ್ರಮಗಳಿಂದಲೂ, ಮಾರ್ಕ್ಸ್‌ವಾದವು ಅತ್ಯಂತ ಪ್ರಾಯೋಗಿಕ ಕ್ರಾಂತಿಕಾರಿ ತತ್ವ ಎಂದು ತತ್ವಶಃ ಒಪ್ಪಿಗೆಯಾಗುತ್ತಾ ಬಂದುದರಿಂದಲೂ ನೆರೊಡ್ನಿಕರೂ, ನೆರೋಡ್ನಿಕರ ವಾದವೂ ರಷ್ಯಾದ ರಾಜಕೀಯದಿಂದ ದೂರ ಸರಿಯಿತು.

ಹೆಚ್ಚಿನ ಅಭ್ಯಾಸ ಕೂಟಗಳ ಸದಸ್ಯರನ್ನೊಳಗೊಂಡ "ರಷ್ಯನ್ ಸಮಾಜವಾದೀ-ಪ್ರಜಾಸತ್ತಾತ್ಮಕ ಲೀಗ್"ಎಂಬ ರಾಜಕೀಯ ಪಾರ್ಟಿಯು ಸ್ಥಾಪಿಸಲ್ಪಟ್ಟಿತು. ಅದರ ಸದಸ್ಯರು 1890ರ ಮುಖ್ಯವಾಗಿ ವಿಶೇಷವಾಗಿ ಕಾರ್ಮಿಕ ಸಂಘಟನೆಗಳಿಗೆ ಗಮನ ಕೊಟ್ಟು ಕಾರ್ಮಿಕರ ಆರ್ಥಿಕ ಹೋರಾಟಗಳನ್ನು ಸಂಘಟಿಸಿದರು. ದೊಡ್ಡ 'ದೊಡ್ಡ ಕಾರ್ಮಿಕ ಮುಷ್ಕರಗಳು ನಡೆದವು. ಕಾರ್ಖಾನೆಗಳೊಳಗೆ ಬಂಡವಾಳಶಾಹಿಗಳಿಂದ ನಡೆಯುತ್ತಿದ್ದ ಕ್ರೂರ ದಬ್ಬಾಳಿಕೆಯನ್ನು ಕಾರ್ಮಿಕರು ತಮ್ಮ ಸಂಘಟನೆಯ ಬಲದಿಂದ, ಮುಷ್ಕರಗಳ ಮೂಲಕ ಹೊಡೆದು ಹಾಕಿದರು. ದುಡಿತದ ಗಂಟೆ ನಿರ್ಣಯ, ಕೂಲಿ ಹೆಚ್ಚಳ, ರಜಾ ಅನುಕೂಲತೆ, ಫೇಕ್ಟರಿಯೊಳಗೆ ಕೆಲಸದ ಕೆಲವು ಅನುಕೂಲತೆಗಳು ಇತ್ಯಾದಿ ಸವಲತ್ತುಗಳನ್ನು ಕಾರ್ಮಿಕರು ಪಡೆದರು. ಕೆಲವು ಲೇಬರ್ ಕಾನೂನುಗಳನ್ನು ಜ್ಹಾರ್‌ಶಾಹಿ ಆಡಳಿತೆಯು ಅಂಗೀಕರಿಸುವಂತೆ ನಿರ್ಬಂಧಿಸಲ್ಪಟ್ಟಿತು.

ಆದರೆ ಈ ಸಮಾಜವಾದಿಗಳು ಕಾರ್ಮಿಕರ ಮಧ್ಯೆ ಧುಮುಕಿ ಅವರನ್ನು ಸಂಘಟಿಸಿ ಅವರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ವಿರೋಧಿಸಿ ಅವರ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ನಡೆಸುವುದರಲ್ಲೇ ನಿರತರಾಗಿ "ಇದೇ ಸಮಾಜವಾದೀ ಕ್ರಾಂತಿಕಾರಿಗಳ ಕೆಲಸ"ವೆಂದು ನಂಬಿದರು. "ನಮಗೆ ಈ ಪ್ರಾಯೋಗಿಕ ಕೆಲಸ ಸಾಕು; ನಮಗೆ ಯಾವ ತತ್ವವೂ ಬೇಡ"ಎಂಬ ಅಭಿಪ್ರಾಯವೂ, "ಕೆಲವು ಬುದ್ಧಿವಂತ ಮುಂದಾಳುಗಳಿಗಿಂತ ನೂರು ಮಂದಿ ಹೆಡ್ಡ ಜನರು ಉತ್ತಮ" ಎಂಬ ಅಭಿಪ್ರಾಯವೂ ಕಾರ್ಮಿಕರ ಮಧ್ಯೆ, ಬುದ್ಧಿಜೀವಿಗಳ ಮಧ್ಯೆ, 'ಸಮಾಜವಾದಿ'ಗಳ ಮಧ್ಯೆ ಪ್ರಚಾರವಾಗಲು ಆರಂಭವಾಯಿತು.

ಆ ಸಮಯಕ್ಕೆ ಸರಿಯಾಗಿ "ಸಮಾಜವಾದಿಗಳ ಕರ್ತವ್ಯವೇನು" ಎಂಬುದನ್ನು ಸ್ಪಷ್ಟಪಡಿಸಿ ಕಾರ್ಮಿಕ ವರ್ಗವು ದೃಢವಾಗಿ ಮಾರ್ಕ್ಸ್‌ವಾದದ ಪಥವನ್ನು ಅನುಸರಿಸುವಂತೆ ಮಾಡಲು ಲೆನಿನರು "ಕರ್ತವ್ಯವೇನು ?" ಎಂಬ ಚಾರಿತ್ರಿಕ ಗ್ರಂಥವನ್ನು ಬರೆದರು. ಅದರಲ್ಲಿ "ಆರ್ಥಿಕವಾದ, ಯೂನಿಯನುವಾದ"ದಿಂದ ಕಾರ್ಮಿಕ ವರ್ಗಕ್ಕೆ ಹೇಗೆ ವಿಮೋಚನಾ ಕ್ರಾಂತಿ ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಲೆನಿನರು ಸಾಧಿಸಿಕೊಟ್ಟರು. "ಆರ್ಥಿಕವಾದವು ಸಮಾಜವಾದಿಗಳ ಮುಂದಿರುವ ಅತೀ ದೊಡ್ಡ ಆತಂಕ. ಅದು ಕಾರ್ಮಿಕ ವರ್ಗವನ್ನು ಸದಾಕಾಲ ಬಂಡವಾಳಶಾಹಿ ವರ್ಗದ ಗುಲಾಮ ವರ್ಗವಾಗಿ ಇರಿಸುವುದೆಂದೂ, ಈ ವಾದವು ಬಂಡವಾಳಶಾಹೀ ಬಾಲಬಡುಕವಾದವೆಂದೂ ಅವರು ಈ ಗ್ರಂಥದಲ್ಲಿ ವಿವರ ಮಾಡಿ ಕೊಟ್ಟರು.

ಅಲ್ಲದೆ 1903ರಲ್ಲಿ ನಡೆದ "ರಷ್ಯನ್ ಸಮಾಜವಾದಿ-ಪ್ರಜಾಸತ್ತಾತ್ಮಕ ಪಾರ್ಟಿಯ ಸಮ್ಮೇಳನ"ದಲ್ಲಿ "ಸಮಾಜವಾದೀ ಕ್ರಾಂತಿಕಾರಕ ಕಾರ್ಯಕ್ರಮವನ್ನು ಒಪ್ಪುವ, ಒಬ್ಬ ಪಾರ್ಟಿ ಸದಸ್ಯನು" 'ಪಾರ್ಟಿಗೆ ಚಂದಾ ಲೆವಿ ಕೊಡುವ ಮತ್ತು ಪಾರ್ಟಿಯ ಒಂದಲ್ಲ ಒಂದು ಘಟಕದಲ್ಲಿದ್ದು ಪಾರ್ಟಿಯ ಕೇಂದ್ರೀಯ ಶಿಸ್ತಿಗೆ ಒಳಗಾಗಿರಲೇಬೇಕು' ಎಂಬ ಕ್ರಾಂತಿಕಾರಕ ಸಂಘಟನಾ ಸೂತ್ರವು ಅಂಗೀಕರಿಸಲ್ಪಡುವಂತೆ ಹೋರಾಡಿದರು. ಸಮ್ಮೇಳನವು ಈ ಸೂತ್ರವನ್ನು ಬಹುಮತದಿಂದ ಅಂಗೀಕರಿಸಿತು. ಆದರೆ ಪಾರ್ಟಿ ಮಾತ್ರ "ಬಹುಮತವುಳ್ಳ ಬೊಲ್ಶೆವಿಕ್ ಗುಂಪು, ಅಲ್ಪಮತವುಳ್ಳ ಮೆನ್ಶೆವಿಕ್ ಗುಂಪು" ಎಂದು ಎರಡು ಗುಂಪುಗಳಾಗಿ ಒಡೆಯಿತು. 1912ರ ವರೆಗೆ ರಷ್ಯನ್ ಸಮಾಜವಾದಿ ಪಾರ್ಟಿಯಲ್ಲಿ ಈ ಎರಡು ಗುಂಪುಗಳು ಬೇರೆ ಬೇರೆ ಕಾರ್ಯತಂತ್ರಗಳನ್ನು ಪ್ರತಿಪಾದಿಸುತ್ತಾ ಪ್ರಚಾರ ಮಾಡುತ್ತಾ ಕಾರ್ಯವೆಸಗುತ್ತಾ ಬಂದವು. 1912ರಲ್ಲಿ ಬೊಲ್ಶೆವಿಕ್ ಪಾರ್ಟಿ ಮತ್ತು ಮೆನ್‌ಶೆವಿಕ್ ಪಾರ್ಟಿಗಳೆಂದು ಎರಡು ಪಾರ್ಟಿಗಳಾದವು.

1904-1906ರ ವರೆಗೆ—

1903 ರಿಂದಲೇ ರಷ್ಯಾದಲ್ಲಿ 1905ರ ಕ್ರಾಂತಿಯ ಬಾಹ್ಯ ಚಿಹ್ನೆಗಳು ಕಾಣುತ್ತಿದ್ದವು. ಜಡವಾಗಿದ್ದ ರೈತಾಪಿ ಜನತೆಯ "ಜಡತೆ" ಮಾಯವಾಗುತ್ತಿದ್ದುದರ ಕುರುಹುಗಳು ಕಂಡು ಬಂದವು. ರೈತರು ಅಲ್ಲಲ್ಲಿ ಸಾಮೂಹಿಕವಾಗಿ ದಂಗೆ ಎದ್ದು ತಮ್ಮನ್ನು ನೇರವಾಗಿ ದಬ್ಬಾಳಿಕೆ ಮಾಡುತ್ತಿದ್ದ ಸಾಮಂತವಾದೀ ಒಡೆಯರನ್ನು ಜ್ಹಾರ್‌ಶಾಹೀ ನೌಕರಶಾಹಿ ಅಧಿಕಾರಿಗಳನ್ನು ಹೊಡೆದು ಹಾಕುತ್ತಿದ್ದರು. ಕಾರ್ಮಿಕರು ದೇಶದಾದ್ಯಂತ ಮುಷ್ಕರಗಳನ್ನು ನಡೆಸಿದರು. ಅವರ ಮುಷ್ಕರಗಳು ಕೇವಲ ಆರ್ಥಿಕ ಮುಷ್ಕರವಾಗಿರಲಿಲ್ಲ. ಅವರು ಶಸ್ತ್ರಗಳನ್ನು ಧರಿಸಿ ಫೇಕ್ಟರಿಗಳನ್ನು ಕೈವಶ ತೆಗೆದುಕೊಳ್ಳುತ್ತಿದ್ದರು. ನಗರ ನಗರಗಳಲ್ಲಿ ಪ್ರಾಂತ ಪ್ರಾಂತಗಳಲ್ಲಿ ಸಾರ್ವತ್ರಿಕ ಮುಷ್ಕರಗಳನ್ನೂ ನಡೆಸುತ್ತಾ ಬಂದರು. ರಷ್ಯದಾದ್ಯಂತ 'ಅತೃಪ್ತಿ' ತಾಂಡವವಾಡುತ್ತಿದ್ದು, ಜನತೆ ಜ್ಹಾರ್‌ಶಾಹಿ ಪದ್ಧತಿಯನ್ನು ನಾಶಮಾಡಲು "ತಾವಾಗಿಯೇ ದಂಗೆ"ಯೇಳುತ್ತಿದ್ದರು.

ಈ ಬಾಹ್ಯ ಪರಿಸ್ಥಿತಿಯನ್ನು ಕೂಲಂಕುಶವಾಗಿ ಅಂದಾಜು ಮಾಡಿದ ಲೆನಿನರು "ಸಮಾಜವಾದಿ ಪಾರ್ಟಿಯು ಇದೀಗ ಧೈರ್ಯದಿಂದ ಮುಂದೆ ಬಂದು ಈ ಕ್ರಾಂತಿಯ ಮುಂದಾಳುತ್ವವನ್ನು ಕಾರ್ಮಿಕ ವರ್ಗ ವಹಿಸುವಂತೆ ಮುನ್ನಡೆಯಬೇಕು'' ಎಂದು ಕರೆಕೊಟ್ಟರು. ಆಗ ಪ್ಲೆಕೊನೋವ್, ಮಾರ್ಟನೋವ್ ಮೊದಲಾದ ಮೆನ್‌ಶೆವಿಕ್ ಪರಿಷ್ಕರಣವಾದಿಗಳು "ಇದೀಗ ರಷ್ಯಾದಲ್ಲಿ ನಡೆಯುತ್ತಿರುವ ಕ್ರಾಂತಿ ಸಾಮಂತವಾದೀ ಪದ್ಧತಿಯ ವಿರುದ್ಧ ನಡೆಯುವ ಪ್ರಜಾಪ್ರಭುತ್ವ ಕ್ರಾಂತಿ. ಇದನ್ನು ಮಾರ್ಕ್ಸ್‌ರು ತಮ್ಮ ಗ್ರಂಥದಲ್ಲಿ ಬರೆದಂತೆ ಚಾರಿತ್ರಿಕವಾಗಿ ಆಯಾಯ ದೇಶದ ಬಂಡವಾಳ ವರ್ಗವು ಮುಂದಾಳುತ್ವ ಕೊಟ್ಟು ನಡೆಸಬೇಕು. ಕಾರ್ಮಿಕ ವರ್ಗವು ಬಂಡವಾಳ ವರ್ಗಕ್ಕೆ ಬೆಂಬಲ ಕೊಟ್ಟರೆ ಸಾಕು; ಕಾರ್ಮಿಕ ವರ್ಗವು ಮುಂದೆ ಬಂಡವಾಳಶಾಹಿಯು ಅಧಿಕಾರ ವಹಿಸಿ ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸಿದ ನಂತರ ಅದರ ವಿರುದ್ಧ ಹೋರಾಡಿ ಸಾಮಾಜಿಕ ಕ್ರಾಂತಿಯನ್ನು ನಡೆಸಬೇಕು" ಎಂದು ವಾದಿಸಿ ತಮ್ಮ "ಮಾರ್ಕ್ಸ್‌ವಾದಿ ಗ್ರಂಥಪಠನ''ವನ್ನು ಪ್ರದರ್ಶಿಸಿದರು.

ಆದರೆ ಮಾರ್ಕ್ಸ್‌ವಾದವು ಪುಸ್ತಕದ ಬದನೆಕಾಯಿಯಲ್ಲ ತಾನೇ. ಮಾರ್ಕ್ಸ್‌ವಾದವು ಕಾರ್ಮಿಕ ವರ್ಗದ ಲೋಕ ಕಣ್ಣೋಟ ತಾನೇ. ಕಾರ್ಮಿಕ ವರ್ಗದ ಪ್ರಾಯೋಗಿಕ ಕ್ರಾಂತಿ ತತ್ವ ತಾನೇ.

ಆದ ಕಾರಣ, ಮಾರ್ಕ್ಸ್‌ವಾದದ ಕ್ರಾಂತಿಕಾರಿ ತತ್ವಗಳನ್ನು ಪ್ರಾಯೋಗಿಕವಾಗಿ ಗ್ರಹಿಸಿಕೊಂಡ ಲೆನಿನರು ಈ ಮೆನ್‌ಶೆವಿಕರ ವಾದವನ್ನು ತೀವ್ರವಾಗಿ ಪಾರ್ಟಿಯ ಒಳಗೂ, ಪಾರ್ಟಿಯ ಹೊರಗೂ ವಿರೋಧಿಸಿದರು. "ನೀವು ಬಂಡವಾಳಶಾಹಿ ಬಾಲಬಡಕರು, ಕಾರ್ಮಿಕ ವರ್ಗದ ಮಧ್ಯೆ ಬಂಡವಾಳಶಾಹಿ ಏಜಂಟರು" ಎಂದು ಕಟುವಾಗಿ ಟೀಕಿಸಿದರು.

ಮಾರ್ಕ್ಸ್‌ವಾದಿಗಳಿಗೆ ಈ ಕ್ರಾಂತಿ ಅತ್ಯಂತ ದೊಡ್ಡ ಸುಸಂದರ್ಭ. ರೈತರೂ ಕಾರ್ಮಿಕರೂ ತಾವಾಗಿಯೇ ಬೀದಿಗಿಳಿದು ಬಂಡವಾಳಗಾರರ ವಿರುದ್ಧ, ಜಮೀನ್ದಾರರ ವಿರುದ್ಧ ಹಾಗೂ ಜ್ಹಾರ್‌ಶಾಹೀ ನಿರಂಕುಶ ಸರಕಾರದ ವಿರುದ್ಧ ಶಸ್ತ್ರ ಹಿಡಿದು ಹೋರಾಟವನ್ನು ಆರಂಭಿಸಿದ್ದರು. ಫೇಕ್ಟರಿಗಳನ್ನು ಕಾರ್ಮಿಕರು ಸ್ವಾಧೀನ ಪಡಿಸಿದರು; ಪೋಲೀಸು ಮತ್ತು ಸೈನಿಕರ ವಿರುದ್ಧ ''ರಷ್ಯಾದ ನಗರಗಳ ಬೀದಿಗಳಲ್ಲಿ ಅಡ್ಡಿಗಳನ್ನೊಡ್ಡಿ'' ಹೋರಾಡುತ್ತಿದ್ದರು. ಹಳ್ಳಿಗಳಲ್ಲಿ ರೈತರೂ ಕೃಷಿ ಕೂಲಿಗಾರರೂ ಸಾಮೂಹಿಕ ದಂಗೆಯೆಂದು ರೈತರ ನ್ಯಾಯವನ್ನು ಹಳ್ಳಿಗಳಲ್ಲಿ ಸ್ಥಾಪಿಸುತ್ತಿದ್ದರು. "ಸಾವಿರಾರು ವರ್ಷಗಳ ಪಾಳೆಯಗಾರೀ ವಿರೋಧ ಬೆಳೆದು ಬಂದ ದ್ವೇಷ"ವನ್ನು ಸಾಧಿಸಲು ರೈತ ಸಮೂಹಗಳು ಹೊರಟಿದ್ದವು. ಇಂತಹ ಸಂಧಿಯಲ್ಲಿ ಕಾರ್ಮಿಕ ವರ್ಗದ ರಾಜಕೀಯ ಪಾರ್ಟಿಯಾದ "ಪ್ರಜಾಸತ್ತಾತ್ಮಕ ಸಮಾಜವಾದಿ ಐಕ್ಯ''ವು ಹೋರಾಟಗಳಲ್ಲಿ ಧುಮುಕಿ ಜನತೆಯ ಬದಿಯಲ್ಲಿ ನಿಂತು ಹೋರಾಡಿ ಇಡೀ ಕ್ರಾಂತಿಗೆನೇ ಮುಂದಾಳುತ್ವ ಕೊಡಲು ಮುಂದಾಗಬೇಕು.....ಕ್ರಾಂತಿ ಸೋತರೂ ಕ್ರಾಂತಿಯ ಅನುಭವ ಸಿಕ್ಕಿ ಕಾರ್ಮಿಕ ವರ್ಗಕ್ಕೆ ಮುಂದಿನ ರಾಜಕೀಯ ಹೋರಾಟಗಳನ್ನು ಯಶಸ್ವಿಯಾಗಿ ನಡೆಸಲು ಅನುಕೂಲವಾಗುವುದು.

ಈ ಸಂದರ್ಭದಲ್ಲಿಯೇ ಲೆನಿನರು ''ಎರಡು ತಂತ್ರಗಳು'' ಎಂಬ ಗ್ರಂಥವನ್ನು ಬರೆದು 1904–1906ರ ರಷ್ಯನ್ ಕ್ರಾಂತಿಯ ಬಗ್ಗೆ ಬೊಲ್ಶೆವಿಕರ ಮತ್ತು ಮೆನ್ಶೆವಿಕರ (ಕ್ರಾಂತಿಕಾರಿಗಳ ಮತ್ತು ಪರಿಷ್ಕರಣವಾದಿಗಳ) ನಿಲುವು ಎಂಥಾದ್ದು ಎಂಬುದನ್ನು ಸ್ಪಷ್ಟವಾಗಿ ವಿವರಿಸಿ ಕೊಟ್ಟರು.

1904-1906ರ ಕ್ರಾಂತಿಯ ಬಗ್ಗೆ ಅನಂತರ ಲೆನಿನರು ತಮ್ಮ ಅನುಭವವನ್ನು ವಿವರಿಸುತ್ತಾ "1904–1906ರ ರಷ್ಯನ್ ಕ್ರಾಂತಿಯು 1917ರ ಅಕ್ಟೋಬರ್ ಕ್ರಾಂತಿಗೆ ಒಂದು "ರಿಹರ್ಸಲ್" ಎಂದು ಕರೆದರು.

(ಮುಂದುವರೆಯುವುದು)

ಜಗತ್ತಿನ ಮಹಾನ್ ಮಾನವತಾವಾದಿ, ತತ್ವಶಾಸ್ತ್ರಜ್ಞ, ವೈಜ್ಞಾನಿಕ ಸಮಾಜವಾದೀ ಸಿದ್ಧಾಂತದ ಪ್ರವರ್ತಕ, ಕಾರ್ಲ್‌ಮಾರ್ಕ್ಸ್ ನಮ್ಮಿಂದ ಮರೆಯಾಗಿ ಒಂದು ಶತಮಾನ ಉರುಳಿದೆ. ಈ ಒಂದು ಶತಮಾನದೊಳಗೆ ಜಗತ್ತಿನ ಮುಖವೇ ಬದಲಾಗಿಬಿಟ್ಟಿದೆ. ಜಗತ್ತಿನ ಮೂರನೇ ಒಂದು ಭಾಗ ಸಮಾಜವಾದವನ್ನು ಅಂಗೀಕರಿಸಿದೆ. ಕಾರ್ಲ್‌ಮಾರ್ಕ್ಸ್ ಮತ್ತು ಎಂಗಲ್ಸ್ ನಂತರ ಲೆನಿನ್ನರ ಬೋಧನೆಗಳು ಈ ಶತಮಾನದ ಒಂದು ದೊಡ್ಡ ಕ್ರಾಂತಿಕಾರೀ ಶಕ್ತಿಯಾಗಿ ರೂಪುಗೊಂಡಿವೆ; ಶೋಷಣೆ ಮತ್ತು ಯುದ್ಧಗಳಿಂದ ವಿಮೋಚನೆ ಬಯಸುವ ಜನತೆಗೆ ದಾರಿ ದೀಪವಾಗಿವೆ. ಜಗತ್ತಿನ ಕೋಟ್ಯಾಂತರ ದುಡಿಯುವ ಜನರ ಹೃದಯಗಳಲ್ಲಿ ಮಾರ್ಕ್ಸ್‌ನ ಸಿದ್ಧಾಂತ ತುಡಿಯುತ್ತಿದೆ.

ಮಾರ್ಚ್ 14, 1983ಕ್ಕೆ ಸರಿಯಾಗಿ ಮಾರ್ಕ್ಸ್ ಮರೆಯಾಗಿ ಸರಿಯಾಗಿ ನೂರು ವರುಷಗಳು ಗತಿಸುತ್ತದೆ. ಮಾರ್ಕ್ಸ್‌ರ ಶತಮಾನೋತ್ಸವವನ್ನು ಜಗತ್ತಿನಾದ್ಯಂತ ಅತ್ಯಂತ ಅರ್ಥ ಪೂರ್ಣವಾಗಿ ಆಚರಿಸಲಾಗುತ್ತದೆ.

ಈ ಸಂಧರ್ಭದಲ್ಲಿ ಕಾರ್ಲ್ ಮಾರ್ಕ್ಸ್‌ರ ಕುರಿತಾದ ಮಾರ್ಕ್ಸ್‌ವಾದದ ಕುರಿತಾದ ಲೇಖನಗಳನ್ನು 'ಐಕ್ಯರಂಗ' ಪ್ರಕಟಿಸುತ್ತಿದೆ.

ಮೂವತ್ತನಾಲ್ಕನೆಯ ಗಣರಾಜ್ಯೋತ್ಸವ

—ಎನ್ಕೆ

1950 ಜನವರಿ 26 ರಂದು ನಮ್ಮ ದೇಶದ ಜನತೆ ಪ್ರಥಮ ಗಣ ರಾಜ್ಯೋತ್ಸವನ್ನು ಅತ್ಯಂತ ಉತ್ಸಾಹದಿಂದ ಆಚರಿಸಿದ್ದರು. ಭಾರತ ದೇಶದ ವಿಭಜನೆ, ಅದರ ಪರಿಣಾಮವಾಗಿ ದೇಶ ಎದುರಿಸಬೇಕಾಗಿ ಬಂದ ನಿರಾಶ್ರಿತರ ದಾರುಣ ಪ್ರಶ್ನೆ, ಜಾತೀಯ ದಂಗೆ ಮೊದಲಾದ ಕರುಳು ಕರಗುವಂಥ ಸಮಸ್ಯೆಗಳಿದ್ದರೂ ಕೂಡ, ದೇಶ ಸ್ವತಂತ್ರವಾದ ಸಂವಿಧಾನವನ್ನು ಪಡೆದು,ಸಾರ್ವಭೌಮತ್ವವನ್ನು ಗಳಿಸಿದ ವರ್ಷ ಅದಾಗಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಚಿಕ್ಕಂದಿನಿಂದಲೇ ಸರ್ವತ್ಯಾಗ ಮಾಡಿ ದೀರ್ಘಕಾಲದ ಬಂಧನ, ಲಾಟಿ ಏಟು, ದುಃಖ ದುಮ್ಮಾನಗಳನ್ನೆದುರಿಸಿ ಹೋರಾಡಿದ ನಮಗೆ, ಆಗಸ್ಟ್ 15 ರಂತೆಯೇ, ಅದಕ್ಕಿಂತಲೂ ಹೆಚ್ಚಾಗಿ ಜನವರಿ 26 ಸಾರ್ವಭೌಮತ್ವ ಪಡೆದ ದಿನ ಅತ್ಯಾನಂದದ ದಿನವಾಗಿತ್ತು. ಬ್ರಿಟಿಷರ ಗುಲಾಮಗಿರಿಯ ವಿರುದ್ಧ ಹೋರಾಡಿದ ಧೀರ ಭಾರತದ ಜನತೆಗೆ ನಾಗರೀಕ ಹಕ್ಕು ಕೊಡ ಮಾಡಿದ್ದಷ್ಟೇ ಅಲ್ಲ, ತನಗೆ ಬೇಕಾದ ಸರಕಾರವನ್ನು ಚುನಾಯಿಸುವ,ಸಂವಿಧಾನದಂತೆ ಆಡಳಿತೆ ನಡೆಸುವ,ನಾಗರಿಕರಿಗೆ ಎಲ್ಲ ಭದ್ರತೆ—ನೌಕರಿ, ಜೀವನ, ವಸತಿ, ರಕ್ಷಣೆ—ನೀಡುವ ಹಕ್ಕುಗಳನ್ನು ಒದಗಿಸುವಂಥ ಸಂವಿಧಾನ ಜ್ಯಾರಿಯಲ್ಲಿ ಬಂದದಿನ ಅದಾಗಿತ್ತು. ಅಂಥ ಭರವಸೆ ಹೊಂದಿ ಜೀವನ ನಡೆಸುತ್ತ ಬಂದ ಸ್ವಾತಂತ್ರ್ಯಯೋಧರಿಗೂ ನಾಗರೀಕರಿಗೂ ಮೂವತ್ತಮೂರು ವರ್ಷ ಮುಗಿಸಿ ಮೂವತ್ತನಾಲ್ಕನೆಯ ಗಣ ರಾಜ್ಯೋತ್ಸವ ಆಚರಿಸುತ್ತಿರುವಾಗ ಒಂದೆಡೆ ನಿರಾಸೆಯ ಕಾರ್ಮೋಡಗಳು ಆವರಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಮತ್ತೊಂದೆಡೆ ಆಶಾಕಿರಣ ಇಣಿಕಿ ನೋಡುತ್ತಿರುವುದನ್ನೂ ನೋಡುತ್ತಿದ್ದೇವೆ.

ಗಣರಾಜ್ಯದಲ್ಲಿ ಅಳವಡಿಸಿಕೊಂಡ ಅಂಗ ಸಂಸ್ಥೆಗಳು ಉಳಿದರೆ, ಇಂಥ ಸಂಸ್ಥೆಗಳನ್ನು ಒಳಗೊಂಡಂಥ ಪದ್ಧತಿ ದೇಶದ ಸಮಸ್ಯೆಗಳನ್ನು ಸಮರ್ಥವಾಗಿ ಪರಿಹರಿಸಿದರೆ, ದೇಶದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಂಥ, ಸಂವಿಧಾನದಲ್ಲಿ ನಿರೂಪಿಸಿರುವ ಅಂಗ ಸಂಸ್ಥೆಗಳನ್ನು ಸರಿಯಾಗಿ ಉಪಯೋಗಮಾಡಿಕೊಳ್ಳುವ ಮುಖಂಡತ್ವ ಇಲ್ಲದಿದ್ದರೆ ಜನರ ಸಮಸ್ಯೆಗಳು ಪರಿಹರಿಸಲ್ಪಡಲು ಶಕ್ಯವಿಲ್ಲ, ಗಣರಾಜ್ಯ ನಿಜವಾದ ಗಣರಾಜ್ಯವಾಗುಳಿಯಲೂ ಸಾಧ್ಯವಿಲ್ಲ,

ಆದ್ದರಿಂದ ಕಣ್ಣು ಮುಂದೆ ಕನ್ನಡಿಯನ್ನು ಹಿಡಿದು 33 ವರ್ಷಗಳ ನಮ್ಮ ಗಣರಾಜ್ಯದ ನಕಾಶೆಯನ್ನು ನೋಡುತ್ತ ಹೋದಂತೆ ಯಾವ ಮಹೋದ್ದೇಶದ ಸಲುವಾಗಿ ಸಂವಿಧಾನವನ್ನು ನಿರ್ಮಿಸಿ ಗಣರಾಜ್ಯವೆಂದು ಸಾರಿ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದೆವೋ, ಒಂದೊಂದು ವರ್ಷ ಉರುಳಿದಂತೆ ಸಂವಿಧಾನದ ಒಂದೊಂದು ಅಂಗವನ್ನು ಮೊಟಕುಗೊಳಿಸುವ, ಸಂವಿಧಾನದ ಪ್ರಸ್ತಾವನೆಯಲ್ಲಿ ಸಾರಿದ ಮೂಲ ಸಿದ್ಧಾಂತವನ್ನು ಸಂಪೂರ್ಣ ಕಡೆಗಣಿಸುವ ಚಿತ್ರವನ್ನು ಕಾಣುತ್ತಿದ್ದೇವೆ.

ಸಮತಾವಾದದ ಮೂಲ ಸಿದ್ಧಾಂತವನ್ನು ಬದಿಗಿಟ್ಟು ಸಮ್ಮಿಶ್ರ ಆರ್ಥಿಕ ವ್ಯವಸ್ಥೆಯ ನೆಪದಲ್ಲಿ ಅಮೇರಿಕ, ಜರ್ಮನಿ, ಮತ್ತಿನ್ನಿತರ ಗುತ್ತೇದಾರಿ ಬಂಡವಾಳದಾರರಿಗೆ ದೇಶದ ಮಹಾದ್ವಾರವನ್ನು ತೆಗೆದಿಟ್ಟು, ರಾಷ್ಟ್ರದ ಅಂತರಿಕ ವ್ಯವಹಾರದಲ್ಲಿ ಅವರು ಬಹಿರಂಗ ಕೈವಾಡ ನಡೆಸುವಂತೆ ಮಾಡಿದೆ. ವಿದೇಶಿ ಗುತ್ತೇದಾರಿ ಬಂಡವಾಳ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡದೆ, ಇವುಗಳ ಬಂಡವಾಳ ಹೂಡುವಿಕೆ, ಲಾಭಗಳ ಮೇಲೆ ಹೇರಿದ ನಿರ್ಬಂಧಗಳನ್ನೂ ಇತ್ತೀಚಿಗೆ ತೆಗೆದು ಹಾಕಿ, ಭಾರತ ದೇಶದ ಸಂಪತ್ತನ್ನೂ, ಜನರನ್ನೂ ಸುಲಿಯಲು ಸಂಪೂರ್ಣ ಅವಕಾಶ ಮಾಡಿಕೊಟ್ಟಿರುವುದನ್ನು ನೋಡುತ್ತಿದ್ದೇವೆ. ಈ ನೀತಿಯಿಂದಾಗಿ, ಗುತ್ತೇದಾರಿ ಬಂಡವಾಳದಾರರ ಸಂಪತ್ತು ಮತ್ತು ಲಾಭ ಗಗನಕ್ಕೇರುತ್ತಿರುವುದನ್ನೂ, ರಾಷ್ಟ್ರೀಯ ಬಂಡವಾಳದಾರರ, ಮಧ್ಯಮ, ಚಿಕ್ಕಪುಟ್ಟ ಕೈಗಾರಿಕೋದ್ಯಮಗಳು ಸಂಕಷ್ಟ, ಹಿಂಜರಿತ,ಹಾಗೆಯೇ ಕಾರ್ಖಾನೆ ಮುಚ್ಚುವಿಕೆಯಂತ ಸಂಕಟಗಳನ್ನೆದುರಿಸುತ್ತಿರುವುದನ್ನೂ ನೋಡುತ್ತಿದ್ದೇವೆ ಇದರಿಂದಾಗಿ ಮೂಲಭೂತ ಭಾರ ಕೈಗಾರಿಕೆಗಳ ಬೆಳವಣಿಗೆಗೆ, ದೇಶದ ಆರ್ಥಿಕ ಭದ್ರತೆಗೆ ಆತಂಕವುಂಟಾಗಿದಷ್ಟೆ ಅಲ್ಲ, ಹೊಸ ಕೈಗಾರಿಕೆಗಳು ಹುಟ್ಟಿಕೊಳ್ಳದೆ, ಇದ್ದ ಕೈಗಾರಿಕೆಗಳೂ ಒಂದಾಗಿ ಅಪಾರವಾದ ನಿರುದ್ಯೋಗಿಗಳ ಸೈನ್ಯವನ್ನು ನೋಡುವಂತಾಗಿದೆ ಬುದ್ಧಿಜೀವಿಗಳ ಉಪಯೋಗಕ್ಕೆ ಸರಿಯಾದ ಅವಕಾಶವಿಲ್ಲದಂತಾಗಿ ಅವರೆಲ್ಲ ದೇಶಬಿಟ್ಟು ಹೋಗುವಂತಾಗಿದೆ

ಸರಕಾರ ಅನುಸರಿಸುತ್ತ ಬಂದ ಆರ್ಥಿಕ ನೀತಿಯಿಂದಾಗಿ ದೊಡ್ಡವರು ದೊಡ್ಡವರೇ ಆಗಿ ಬಡವರು ಬಡವರೇ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಬಡವರ ಸಂಖ್ಯೆ ದೈನಂದಿನ ಹೆಚ್ಚಾಗುತ್ತಿದ್ದು, ದೇಶದ ಮರ್ಯಾದೆಯನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುತ್ತಿದೆ. 33 ವರ್ಷಗಳಲ್ಲಿ ನಾಗರಿಕರಿಗೆ ಅತ್ಯಾವಶ್ಯಕವಾಗಿ ಬೇಕಾದ ಇರಲು ಗುಡಿಸಲು, ದೀಪ, ನೀರು, ಶಾಲೆ, ರಸ್ತೆ, ಕೆಲಸ, ಜೀವನಾವಶ್ಯಕ ವಸ್ತುಗಳನ್ನು ಒದಗಿಸಲು, ಪೂರೈಸಲು ಅಸಮರ್ಥರಾಗಿದ್ದೇವೆ.

ಹಳ್ಳಿ ಪ್ರದೇಶಗಳಲ್ಲಿ ಭೂಮಾಲಿಕ ಪದ್ಧತಿ ಹಾಗೆಯೇ ಮುಂದುವರಿಯುತ್ತಿದ್ದು, ಗೇಣಿದಾರರ, ಕೃಷಿ ಕೂಲಿಗಾರರ ಪರಿಸ್ಥಿತಿ ಹೇಳತೀರದಾಗಿದೆ. ಜೊತೆಯಲ್ಲೇ ಹಳ್ಳಿ-ಪೇಟೆಯ ಅಂತರ ಬೆಳೆಯುತ್ತಿದ್ದು, ಪೇಟೆಯ ಜೀವನಕ್ಕೆ ಆಕರ್ಷಿಸಲ್ಪಟ್ಟು ಹಳ್ಳಿ ಜನರು ಪೇಟೆ ಸೇರಿ ಪರಿಸ್ಥಿತಿ ಉಲ್ಬಣಗೊಳಿಸುತ್ತಿರುವುದನ್ನೂ ನೋಡುತ್ತಿದ್ದೇವೆ.

ಇಂಥ ಪರಿಸ್ಥಿತಿಯಲ್ಲಿ ಭ್ರಷ್ಟಾಚಾರ ಮಹದಾಕಾರವಾಗಿ ಬೆಳೆದು, ರಾಜಕೀಯ ಪಕ್ಷಗಳ ಮತ್ತು ಆಡಳಿತೆಯ ಅಂಗಾಂಗಗಳಲ್ಲಿ ಪ್ರಸರಿಸಿದೆ. ಇದರ ನಿವಾರಣೆಗೆ ಕ್ರಮ ಕೈಗೊಳ್ಳದೆ, ಇಂದಿರಾ ಗಾಂಧಿ ಇದು ಇಡೀ ಜಗತ್ತಿನ ಸಮಸ್ಯೆ ಎಂದು ಹೇಳಿ ಮತ್ತಷ್ಟು ಪ್ರೋತ್ಸಾಹ ನೀಡುತ್ತಿರುವುದನ್ನು ನೋಡುತ್ತಿದ್ದೇವೆ. ಆಡಳಿತೆಯ ಭ್ರಷ್ಟಾಚಾರ ರಾಜಕೀಯದೊಳಗೂ ನುಗ್ಗಿದೆ. ಇಂದಿರಾ ಗಾಂಧಿಯ ಆಡಳಿತೆಯ ವೈಫಲ್ಯ, ಕಾಂಗ್ರೆಸ್ಸಿನೊಳಗಿನ ಆಂತರಿಕ ಬಿಕ್ಕಟ್ಟು, ಗುಂಪುಗಾರಿಕೆ, ಅಧಿಕಾರಕ್ಕಾಗಿ ಕಚ್ಚಾಟಗಳಿಂದಾಗಿ ಕಾಂಗ್ರೆಸ್ಸು ಚುನಾವಣೆಗಳಲ್ಲಿ ಬಹುಮತ ಪಡೆಯಲು ವಿಫಲಗೊಂಡಾಗ, ತನ್ನ ಪಕ್ಷದ ಅಧಿಕಾರ ಸ್ಥಾಪಿಸಬೇಕೆಂಬ ದುರುದ್ದೇಶದಿಂದ ರಾಜಕೀಯದಲ್ಲಿಯೂ ಭ್ರಷ್ಟಾಚಾರ ತರಲಾಗಿದೆ. ಹಿಮಾಚಲ ಪ್ರದೇಶ, ಹರಿಯಾಣ, ನಾಗಾಲ್ಯಾಂಡ್, ಕರ್ನಾಟಕಗಳ ಘಟನೆ ಇದನ್ನು ಎತ್ತಿ ತೋರಿಸುತ್ತದೆ. ಚುನಾವಣೆಯಲ್ಲಿ ತನ್ನ ಪಕ್ಷದ ಉಮೇದುವಾರರಿಗೆ ಟಿಕೇಟು ಕೊಡುವುದರಲ್ಲೂ, ಚುನಾವಣೆಯ ಪ್ರಚಾರ ಮತ್ತು ಮತ ಪಡೆಯುವುದರಲ್ಲೂ ಹಾಗೆಯೇ ಚುನಾವಣೆಯ ನಂತರ ಶಾಸಕರನ್ನು ಕೊಂಡುಕೊಳ್ಳುವುದರಲ್ಲೂ ಭ್ರಷ್ಟಾಚಾರ ಕಾಣುತ್ತಿದ್ದೇವೆ. ಹೀಗಾಗಿ ಚುನಾವಣೆಯ ಕಾಲದಲ್ಲಿ ಮತಪಡೆಯುವಾಗ ಜನತೆಗೆ ಕೊಟ್ಟ ಆಶ್ವಾಸನೆಗಳೆಲ್ಲ ಗಾಳಿಯಲ್ಲಿ ತೂರಲ್ಪಟ್ಟಿವೆ. ಗುಂಡೂರಾವ್, ಭಜನ್ ಲಾಲ್, ಅಂತುಳೆಯಂಥವರೆಲ್ಲ, ಸಿಮೆಂಟ್, ಹಿಟ್ಟಿನ ಗಿರಣಿ ಮೊದಲಾದ ಪ್ರಕರಣಗಳ ಮೂಲಕ ಶಾಸಕರನ್ನು ಕೊಂಡುಕೊಂಡು ಮನಬಂದಂತೆ ಆಡಳಿತೆ ನಡೆಸುವ ದೃಶ್ಯ ನೋಡುತ್ತಿದ್ದೇವೆ.

ಭ್ರಷ್ಟಾಚಾರ ಬೆಳೆಯುತ್ತಿದ್ದಂತೆಯೇ ಆಡಳಿತೆ ಕುಸಿಯುತ್ತಿರುವುದನ್ನೂ ನೋಡುತ್ತಿದ್ದೇವೆ. ಇದರಿಂದಾಗಿ ಜನರ ಸಮಸ್ಯೆಗಳು ಪರಿಹಾರ ಕಾಣುತ್ತಿಲ್ಲ. ಅಸಮಾಧಾನ ಬೆಳೆಯುತ್ತಿದೆ. ನಿಜವಾದ ಸಮಸ್ಯೆಗಳ ಪರಿಹಾರ ಆಗದೆ ಜನರಲ್ಲಿ ಅಸಮಾಧಾನವಾದರೆ ತನಗೆ ಅಧಿಕಾರ ಲಭ್ಯವಾಗಲಿಲ್ಲ. ತನ್ನ ಬೇಳೆ ಬೇಯಲಿಲ್ಲವೆಂದು ರಾಜಕಾರಣಿಗೆ ಅಸಮಾಧಾನ. ಈ ಮಧ್ಯೆ ಆಳುವ ಕಾಂಗ್ರೆಸ್ ಸರಕಾರಕ್ಕೂ ಇದರ ಅರಿವಾಗಿರುತ್ತದೆ. ಜನರು ತಮ್ಮ ದಿನನಿತ್ಯದ ಮತ್ತು ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ ವಿಫಲಗೊಂಡಾಗ ವಿರೋಧ ಪಕ್ಷಗಳು ಜನರ ಆಕಾಂಕ್ಷೆಯನ್ನೂ, ಸರಕಾರದ ವಿಫಲತೆಯನ್ನೂ ಕಂಡು ಹಿಡಿದು ಜನ ಸಂಘಟನೆ ಮಾಡಲು ಪ್ರಾರಂಭ ಮಾಡಿದಾಗ, ಇಂಥ ಸಂಘಟನೆಯಿಂದ ಅಪಾಯ ಕಂಡ ಆಳುವ ಪಕ್ಷ ಜನರಲ್ಲಿ ಜಾತೀಯ, ಮತೀಯ ದ್ವೇಷ ಉಂಟುಮಾಡಿ ದಂಗೆ ಜಗಳಗಳಿಗೆ ಅವಕಾಶಮಾಡಿ ಕೊಟ್ಟು ಜನರ ವಿಚಾರ-ದೃಷ್ಟಿಯನ್ನು ಸರಕಾರದ ವಿಫಲತೆಯಿಂದ ತಂತಮ್ಮೊಳಗೆ ಜಗಳದತ್ತ ಹರಿಸುವಲ್ಲಿ ಸಫಲವಾಗಿರುವುದನ್ನು ನೋಡುತ್ತಿದ್ದೇವೆ.

ಹರಿಜನ, ಗಿರಿಜನರ ಮೇಲೆ ಹಿಂಸಾಚಾರ, ಹಿಂದೂ–ಮುಸಲ್ಮಾನರ ದಂಗೆ ಅಪರೂಪದ ಮಾತಾಗಿ ಉಳಿಯಲಿಲ್ಲ. ಇದರಿಂದಾಗಿ ಜನರೊಳಗೆ ಆತ್ಮವಿಶ್ವಾಸ ನಶಿಸಿ ಹೋಗುವಂತಾಗಿದೆ. ಜಾತೀಯ-ಮತೀಯ ಬೇಧ ಬೆಳೆಯುವಂತಾಗಿ ಸಮಾಜದಲ್ಲಿ ಮತ್ತಷ್ಟು ಒಡಕು, ಅತೃಪ್ತಿ ಹುಟ್ಟಿಕೊಳ್ಳುವಂತಾಗಿದೆ.

ಗುತ್ತೇದಾರಿ ಬಂಡವಾಳಶಾಹಿ-ಭೂಮಾಲಿಕಪರ ನೀತಿಯಿಂದಾಗಿ, ಲಂಚಗುಳಿತನ, ಭ್ರಷ್ಟಾಚಾರ, ಕಳ್ಳಸಂತೆ, ಸ್ವಜನ ಪಕ್ಷಪಾತಗಳೂ ಹಾಗೆಯೇ ಬೆಲೆಯೇರಿಕೆ, ಮತ್ತಿನ್ನಿತರ ಸಮಾಜ ವಿರೋಧಿ ಚಟುವಟಿಕೆಗಳೂ ಇಂದಿರಾ ರಾಜ್ಯದಲ್ಲಿ ಕಾನೂನು ಬದ್ಧ ಕ್ರಮಗಳಾಗಿ ನೆಲೆಸಿದಾಗ, ರೈತರೂ, ಕಾರ್ಮಿಕರೂ ವಿದ್ಯಾರ್ಥಿಗಳೂ ಹಾಗೆಯೇ ಇತರ ಜನ ಸಮೂಹ ಸರಕಾರದ ಈ ನೀತಿಯ ವಿರುದ್ಧ ಸಂಘಟಿತ ಹೋರಾಟ ನಡೆಸಲು ಪ್ರಾರಂಭ ಮಾಡಿದಾಗ, ಸಂವಿಧಾನವಲ್ಲಿ ಜನತೆಗಿತ್ತ ಮೂಲಭೂತ ಹಕ್ಕನ್ನು ಮೊಟಕುಗೊಳಿಸಿ, ಇಂಥ ಜನತಾ ಚಳುವಳಿಗಳನ್ನು ಹತ್ತಿಕ್ಕಲು. ಕೆಲವಾರು ನಾಗರೀಕ ಹಕ್ಕುಗಳನ್ನು, ಕಾರ್ಮಿಕರ ಮುಷ್ಕರಗಳನ್ನು, ಹೋರಾಟಗಳನ್ನು ಮೊಟಕುಗೊಳಿಸುವ ಕಾನೂನುಗಳನ್ನು ಜ್ಯಾರಿಯಲ್ಲಿ ತರಲಾಯಿತು. ಆಳುವ ಪಕ್ಷಕ್ಕೆ ಅನುಕೂಲವಾದ, ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಹಲವಾರು ತಿದ್ದುಪಡಿಗಳನ್ನು ಸಂವಿಧಾನದಲ್ಲಿ ಮಾಡಲಾಯಿತು. 1950ರ ಸಂವಿಧಾನ ಇಂದು ಬಹಳಷ್ಟು ರೂಪಾಂತರಗೊಂಡಿದೆ. ಅದು ಜನತೆಯ ಪರವಾಗಿ ಅಲ್ಲ; ಬಂಡವಾಳದಾರ ಹಿತ ಸಾಧಿಸುವ ರಾಜಕೀಯ ಪಕ್ಷದ ಪರವಾಗಿ ತಿದ್ದುಪಡಿಗಳನ್ನು ಮಾಡಲಾಗಿದೆ.

ಹೀಗೆ ತನ್ನ ಬಂಡವಾಳಶಾಹಿ ಪರ, ಜನವಿರೋಧಿ ನೀತಿಯಿಂದಾಗಿ ತನ್ನ ರಾಜಕೀಯ ಪ್ರಭಾವ ಕಡಿಮೆಯಾಗುತ್ತಿರುವುದನ್ನು ಕಂಡು ಇಂದಿರಾ ಗಾಂಧಿ ದೇಶದ ಸಾರ್ವಭೌಮತ್ವವನ್ನೇ ಮರೆತು ಜಾತೀಯ, ಮತೀಯ; ಛಿದ್ರಕಾರಿ ಶಕ್ತಿಗಳಿಗೆ, ವಿದೇಶಿ ಘಾತುಕ ಶಕ್ತಿಗಳಿಗೆ ದೇಶದಲ್ಲಿ ಅವಕಾಶ ಮಾಡಿಕೊಡುತ್ತಿದ್ದಾರೆ, ಪ್ರೋತ್ಸಾಹಿಸುತ್ತಿದ್ದಾರೆ. ಅವರ ಬೆಂಬಲದಿಂದ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಅಧಿಕಾರ ನಡೆಸುತ್ತಿದ್ದಾರೆ. ಹೀಗಾಗಿ 34ನೆಯ ಗಣರಾಜ್ಯೋತ್ಸವವನ್ನು ಆಚರಿಸುತ್ತಿರುವಾಗ ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಕಾರ್ಯದಲ್ಲಿ ಇಂದಿರಾ ಗಾಂಧಿ ತೊಡಗಿರುವುದನ್ನು ಕಾಣುತ್ತಿದ್ದೇವೆ.

ಈ ಕಾರಣದಿಂದಲೇ ಅಸ್ಸಾಂ ಸಮಸ್ಯೆ ಕಳೆದ ಮೂರು ವರ್ಷಗಳಿಂದಲೂ ಬಗೆಹರಿಯಲಿಲ್ಲ. ಪಂಜಾಬಿನಲ್ಲಿ ಖಲಿಸ್ತಾನ ಚಳುವಳಿ ನಡೆದಿದೆ. ಈ ಚಳುವಳಿಗಳಿಗೆಲ್ಲ ಅಮೇರಿಕದ ಸಾಮ್ರಾಜ್ಯಶಾಹಿಗಳೂ, ಕ್ರಿಶ್ಚನ್ ಮಿಶನರಿಗಳೂ ಮೂಲ ಕಾರಣೀಭೂತರೆಂದು ಗೊತ್ತಿದ್ದರೂ ಕೂಡ ಇಂದಿರಾ ಗಾಂಧಿ ಅವರ ಮೇಲೆ ಕ್ರಮಕೈಗೊಳ್ಳಲು ತಯಾರಿಲ್ಲ. ದೇಶದ ಹಲವಾರು ಕಡೆ ಕ್ರಿಶ್ಚನ್ ಮಿಶನರಿಗಳು ಹಲವಾರು ವಿಧದ ರೂಪತಾಳಿ ನೆಲೆ ಊರಿರುವ ವಿಷಯ ಎಲ್ಲರಿಗೂ ಗೊತ್ತು. ಇವರೆಲ್ಲ ಕಮ್ಯುನಿಸ್ಟ್ ಸಂಘಟನೆಗಳನ್ನು ಮುರಿಯುತ್ತಿದ್ದಾರೆ, ಅದರ ಪ್ರಭಾವ ಕಡಿಮೆಗೊಳಿಸಲು ಯತ್ನಿಸುತ್ತಿದ್ದಾರೆ. ಕಮ್ಯುನಿಸ್ಟ್ ಪಾರ್ಟಿ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳ ಒಳಹೊಕ್ಕು ಅವುಗಳಲ್ಲಿ ಕಮ್ಯುನಿಸ್ಟ್ ವಿರೋಧಿ ವಿಷ ಬೀಜ ಬಿತ್ತಲು ಹವಣಿಸುತ್ತಿದ್ದಾರೆ ಎಂಬ ಒಂದೇ ದೃಷ್ಟಿಯಿಂದ ಇಂದಿರಾ ಸರಕಾರ ಇಂಥ ಛಿದ್ರಕಾರಿ ಶಕ್ತಿಗಳನ್ನು ತಡೆಹಿಡಿಯಲು ಪ್ರಯತ್ನಿಸುತ್ತಿಲ್ಲ. ಇದರ ಜೊತೆಯಲ್ಲೇ ಭಾರತೀಯ ಜನತಾ ಪಾರ್ಟಿ, ಆರ್.ಎಸ್.ಎಸ್., ಹಿಂದೂ ವಿಶ್ವ ಪರಿಷತ್ತು, ಮುಸ್ಲಿಂ ಲೀಗ್, ಜಮಾಯತೇ ಇಸ್ಲಾಂಗಳಂತ ಜಾತೀಯ—ಮತೀಯ ಪಕ್ಷಗಳೂ, ಸಂಘಟನೆಗಳೂ, ಜನರ ಅಸಮಾಧಾನದ ಇಂದಿರಾ ಆಳ್ವಿಕೆಯ ವಿಫಲತೆಯ ಲಾಭ ಪಡೆಯುತ್ತಿರುವುದನ್ನೂ ನೋಡುತ್ತಿದ್ದೇವೆ.

ಹೀಗೆ 33 ವರ್ಷಗಳ ಗಣರಾಜ್ಯದಲ್ಲಿ ಜನರ ಸಮಸ್ಯೆಗಳು ಬಗೆಹರಿಯದೆ ಹೆಚ್ಚಾಗುತ್ತಿವೆ, ನಾಗರೀಕ ಹಕ್ಕುಗಳು ಮೊಟಕುಗೊಂಡಿವೆ, ಜಾತೀಯ—ಮತೀಯ ಶಕ್ತಿಗಳೂ, ಛಿದ್ರಕಾರಿ ಕೃತಿಗಳೂ ಹೆಚ್ಚಾಗಿವೆ, ಬೆಲೆಯೇರಿಕೆ, ಭ್ರಷ್ಟಾಚಾರ, ಲಂಚಗುಳಿತನಗಳು ಮಿತಿ ಇಲ್ಲದಂತಾಗಿವೆ. ಹರಿಜನರ ಮೇಲಿನ ದಬ್ಬಾಳಿಕೆ, ಜಾತೀಯ—

(7ನೇ ಪುಟ ನೋಡಿ)

ಏಷ್ಯಾಡ್ —

(3ನೇ ಪುಟದಿಂದ)

ಭಾರತ ಏಷ್ಯಾಡ್ ಕ್ರೀಡೋತ್ಸವವನ್ನು ನಡೆಸಿದುದರಿಂದ ಆ ದೇಶದ ಕ್ರೀಡಾ ಪಟುಗಳ ಸಾಧನೆಯ ಗುಣಮಟ್ಟ ಹೆಚ್ಚುವುದೆಂಬ ವಾದ ಕೇವಲ ಭ್ರಮೆ. ನಮ್ಮ ಮೂಲಭೂತ ಸಮಸ್ಯೆ ಬಡತನ, ದಾರಿದ್ರ್ಯ, ನಿರುದ್ಯೋಗ, ನಿತ್ರಾಣ, ಪೌಷ್ಟಿಕ ಆಹಾರದ ಕೊರತೆ. ಈ ಸಮಸ್ಯೆಗಳು ವರ್ಷ ವರ್ಷಕ್ಕೂ ಹೆಚ್ಚುತ್ತಿವೆ. 37 ಮಿಲಿಯ ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದ ಒಂದಲ್ಲ ಒಂದು ರೋಗಕ್ಕೆ ತುತ್ತಾಗಿವೆ, ಲಕ್ಷಗಟ್ಟಲೆ ಮಕ್ಕಳು ಕುರುಡಾಗಿವೆ. ಅಸ್ತಿಪಂಜರವಾಗಿ ಉಳಿದಿವೆ. ಭೂಹೀನ ಆದಿವಾಸಿಗಳು, ಕೃಷಿ ಕಾರ್ಮಿಕರು, ಬಡರೈತರು, ಬಡ ಕಾರ್ಮಿಕರು, ಗುಡ್ಡಗಾಡು ಪ್ರದೇಶದ ಜನರು ಹೊಟ್ಟೆ ಬಟ್ಟೆಗಿಲ್ಲದೆ ನರಳುತ್ತಿರುವಾಗ ಅವರ ಮಕ್ಕಳು ಕ್ರೀಡೆಗಳಲ್ಲಿ ಹೇಗೆ ಭಾಗವಹಿಸಿಯಾರು ? ದೇಶದ ಹೆಚ್ಚಿನ ಶಾಲೆ, ಕಾಲೇಜುಗಳಲ್ಲಿ ಕ್ರೀಡಾ ಸೌಲಭ್ಯಗಳೇ ಇಲ್ಲ. ಪೂ. ಜರ್ಮನಿ, ರಷ್ಯಾ, ಚೀನಾ ಮುಂತಾದ ಸಮಾಜವಾದಿ ರಾಷ್ಟ್ರಗಳ ಅನುಭವದಂತೆ ಯುವ ಜನಾಂಗಕ್ಕೆ ಸೂಕ್ತ ತರಬೇತಿ ಕೊಟ್ಟರೆ, ಪೌಷ್ಟಿಕ ಆಹಾರ ಒದಗಿಸಿದರೆ, ವಿಶ್ವದ ಶ್ರೇಷ್ಠ ಕ್ರೀಡಾಪಟುಗಳನ್ನು ಪಡೆಯಬಹುದು. ಭಾರತದಲ್ಲಿ ಕ್ರೀಡೆ ಸಿನೇಮಾದಂತೆ ತಾರಾ ಪಟ್ಟಕ್ಕೇರುವ ಪೈಪೋಟಿ, ಕೆಲವೇ ಜನರ ಯಜಮಾನಿಕೆ ಹಾಗೂ ತಂತ್ರ ಕುತಂತ್ರಗಳಿಗೊಳಗಾಗಿದೆ. ಕ್ರೀಡಾಪಟುಗಳ ದಿನ ಭತ್ತೆ ರೂ. 26 ಆದರೆ ಉತ್ಸವದ ನಿರ್ವಾಹಕ ಅಧಿಕಾರಿಗಳ ಒಂದು ಊಟಕ್ಕೆ ರೂ. 80 ರಿಂದ ರೂ. 100 ರಷ್ಟು ವಿನಿಯೋಗಿಸಿದರೆ, ಕ್ರೀಡಾಪಟುಗಳಿಗೆ ಹೇಗೆ ಪೌಷ್ಟಿಕ ಆಹಾರ ಸಿಗಬೇಕು ?

ಏಷ್ಯಾಡ್‌ಗೆ ಮಾಡಿದ ವೆಚ್ಚದ ಸ್ವಲ್ಪಾಂಶವನ್ನಾದರೂ ದೇಶಾದ್ಯಂತ ಯುವಜನಾಂಗಕ್ಕೆ ಕ್ರೀಡಾ ಸೌಲಭ್ಯಗಳನ್ನೊದಗಿಸಲು ವಿನಿಯೋಗಿಸಿದ್ದರೆ, ಭಾರತ ವಿಶ್ವದಲ್ಲಿ ಗಣ್ಯಸ್ಥಾನ ಪಡೆಯಬಹುದಾಗಿತ್ತು. ಪ್ರತಿ ತಾಲ್ಲೂಕು, ಜಿಲ್ಲೆ, ರಾಜ್ಯ ಮಟ್ಟಗಳಲ್ಲಿ, ಪ್ರತಿ ಒಂದು ಶಾಲೆ, ಕಾಲೇಜು, ವಿಶ್ವ ವಿದ್ಯಾನಿಲಯದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಸಾಕಷ್ಟು ಸೌಕರ್ಯ, ಸಲಕರಣೆ, ತರಬೇತಿಗಳನ್ನು ಒದಗಿಸಿದುದೇ ಆದರೆ ಲಕ್ಷಾಂತರ ಯುವಕ ಯುವತಿಯರು ಸಂತೋಷ, ಆರೋಗ್ಯ ಸಂಪಾದಿಸುತ್ತಿದ್ದರು. ಕಾಮನ್‌ವೆಲ್ತ್, ಏಷ್ಯಾಡ್, ಒಲಂಪಿಕ್ ಇತ್ಯಾದಿ ಅಂತರರಾಷ್ಟ್ರೀಯ ಕ್ರೀಡೋತ್ಸವಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು. ಇಂತಹ ಜನಪರ ನೀತಿಯನ್ನು ಬಂಡವಾಳಶಾಹಿ-ಭೂಮಾಲಿಕ ಪಕ್ಷವಾದ ಇಂದಿರಾ ಕಾಂಗ್ರೆಸ್‌ನಿಂದ ನಿರೀಕ್ಷಿಸುವುದೆಂತು ?

ಆರ್ಥಿಕ ಅಭಿವೃದ್ಧಿಯ ಕುಸಿತ :

ಸಂಪನ್ಮೂಲಗಳನ್ನು ಉಳಿತಾಯ ಮಾಡಿ ಆರ್ಥಿಕ ಅಭಿವೃದ್ಧಿಗೆ ಬಳಸಬೇಕೆಂದು ತಜ್ಞರು ಕರೆ ಕೊಡುತ್ತಿದ್ದಂತೆಯೇ, ಏಷ್ಯಾಡ್‌ಗೆ ರೂ. 1700 ಕೋಟಿಯಷ್ಟು ವೆಚ್ಚ ಮಾಡಿದುದರಿಂದ 1983ರಲ್ಲಿ, ಕೇಂದ್ರ ಸರಕಾರದ ಕೊರತೆ ಹೆಚ್ಚುವುದು, ಜನರ ಮೇಲಿನ ಕರ ಕಂದಾಯ ಹೆಚ್ಚುವುದು, ಉಳಿತಾಯ ಕಡಿಮೆ ಆಗುವುದು, ಆರ್ಥಿಕ ಅಭಿವೃದ್ಧಿಯು ಇನ್ನಷ್ಟು ಕುಸಿಯುವುದು, ಆರನೇ ಯೋಜನೆಯ ಗಾತ್ರ ಇನ್ನೂ ಸಣ್ಣದಾಗುವುದು, ಭೋಗ ಜೀವನ ಹೆಚ್ಚುವುದು, ಬಡತನ ದಾರಿದ್ರ್ಯ ಮಿತಿಮೀರುವುದು.

ಏಷ್ಯಾಡ್‌ಗೆ ಸುರಿಸಿದ ಉಕ್ಕು, ಸೀಮೆಂಟ್, ಮತ್ತಿತರ ಅವಶ್ಯಕ ಸಾಮಗ್ರಿಗಳನ್ನೂ ಸಂಪನ್ಮೂಲಗಳನ್ನೂ ಆರ್ಥಿಕ ಅಭಿವೃದ್ಧಿಗೆ ಬಳಸಿದ್ದರೆ, ನಿರುದ್ಯೋಗ, ಉತ್ಪಾದನೆ ಕೊರತೆ, ಇತ್ಯಾದಿ ಸಮಸ್ಯೆಗಳನ್ನು ಸಾಕಷ್ಟು ಬಗೆಹರಿಸಬಹುದಿತ್ತು. ಶಾಲಾ ಕಟ್ಟಡಗಳ ನಿರ್ಮಾಣ, ರಸ್ತೆಗಳ ನಿರ್ಮಾಣ, ಕುಡಿಯುವ ನೀರು, ವಸತಿ ಸೌಕರ್ಯ, ಬರಗಾಲ ಪೀಡಿತ ಜನರಿಗೆ ಸೂಕ್ತ ಪರಿಹಾರ, ಕೆಲಸಕ್ಕೆ-ಕಾಳು ಯೋಜನೆ, ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಏಷ್ಯಾಡ್‌ಗೆ ಸುರಿಸಿದ ಹಣವನ್ನು ಬಳಸಬಹುದಾಗಿತ್ತು. ಗುಡಿ ಕೈಗಾರಿಕೆ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿಗೆ ಸಾಕಷ್ಟು ಧನ ಸಹಾಯ ಸಿಗದಿರುವಾಗ, ಸಣ್ಣ ಹಾಗೂ ಮಧ್ಯಮ ರೈತರಿಗೆ ಸಾಕಷ್ಟು ಧನ ಸಹಾಯ ಸಿಗದಿರುವಾಗ ಮತ್ತು ಅವರ ಬೆಳೆಗೆ ಯೋಗ್ಯ ಬೆಲೆ ಸಿಗದಿರುವಾಗ, ಏಷ್ಯಾಡ್ ಕ್ರೀಡೆಗೆ ಒಂದು ಸಾವಿರ ಕೋಟಿಗೂ ಹೆಚ್ಚು ಖರ್ಚು ಮಾಡಿರುವುದು ಅವಿವೇಕವೇ ಸರಿ.

ದೇಶದ ಪ್ರತಿಷ್ಠೆ ?

ಏಷ್ಯಾಡ್‌ನಿಂದ ದೇಶದ ಪ್ರತಿಷ್ಠೆ ಹೆಚ್ಚಿದೆ ಎಂದು ವಾದಿಸಲಾಗಿದೆ. ಆದರೆ, ಏಷ್ಯಾಡ್ ಸಂಘಟನೆಯ ಕುರಿತು ದೇಶ ವಿದೇಶಗಳ, ಕ್ರೀಡಾಪಟುಗಳ ಟೀಕೆ, ಪತ್ರಿಕಾ ಪ್ರತಿನಿಧಿಗಳ ಹಾಗೂ ದೂರದರ್ಶನ ವರದಿಗಾರರ ಟೀಕೆ, ಆಕಾಶವಾಣಿ ಮತ್ತು ದೂರದರ್ಶನ ನೌಕರರ ಮುಷ್ಕರವನ್ನು ರಾಷ್ಟ್ರೀಯ ರಕ್ಷಣಾ ಕಾಯಿದೆ, ಅವಶ್ಯಕ ಸೇವಾ ರಕ್ಷಣಾ ಕಾಯಿದೆಗಳಿಂದ ಸ್ತಬ್ಧಗೊಳಿಸಿದ್ದು, ಮಹಿಳಾ ಸ್ವಯಂ ಸೇವಕರ ಮೇಲೆ ಅತ್ಯಾಚಾರ ನಡೆದದ್ದು, ಏಷ್ಯಾಡ್ ಗ್ರಾಮ ಕ್ರೀಡಾಂಗಣ ಹಾಗೂ ಪಂಚ ತಾರಾ ಹೋಟೇಲುಗಳ ನಿರ್ಮಾಣ ಕಾರ್ಯದಲ್ಲಿದ್ದ ಸಾವಿರಾರು ಕಾರ್ಮಿಕರಿಗೆ ಕನಿಷ್ಠ ವೇತನ,ವಸತಿ ಸೌಕರ್ಯ,ವೈದ್ಯಕೀಯ ನೆರವು ಕೊಡದೇ ಇದ್ದುದು, ಅಪಘಾತ ಹಾಗೂ ಮರಣಗಳು ಸಂಭವಿಸಿದ್ದು, ಏಷ್ಯಾಡ್ ಗ್ರಾಮಕ್ಕೆ ಬೇಕಾದ ಭೂಮಿಯನ್ನು ಬಲಾತ್ಕಾರವಾಗಿ ಸಾಕಷ್ಟು ಪರಿಹಾರ ಕೊಡದೆ ಗ್ರಾಮ ನಿವಾಸಿಗಳಿಂದ ಕಸಿದುಕೊಂಡದ್ದು, ಈ ಶೋಷಣೆ, ಅತ್ಯಾಚಾರಗಳ ವಿರುದ್ಧ ಸುಪ್ರೀಂ ಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡದ್ದು, ಇತ್ಯಾದಿಗಳು ದೇಶದ ಪ್ರತಿಷ್ಠೆಯನ್ನು ಹೆಚ್ಚಿಸುವ ಬದಲು ತಲೆಬಾಗಿಸುವಂತೆ ಮಾಡಿವೆ !

●

ಮೂವತ್ತ ನಾಲ್ಕನೆಯ ಗಣರಾಜ್ಯೋತ್ಸವ

(6ನೇ ಪುಟದಿಂದ)

ಮತೀಯ ದಂಗೆಗಳೆಲ್ಲ ದಿನದ ಮಾತಾಗಿವೆ. ದೇಶದಲ್ಲೇ ಏಕೈಕ ಪ್ರಭಾವಿತ ರಾಜಕೀಯ ಶಕ್ತಿಯಾಗಿದ್ದ ಕಾಂಗ್ರೆಸ್ಸು ತನ್ನ ಪ್ರಭಾವವನ್ನು ಕಳೆದುಕೊಂಡು ಜಾತೀಯ, ಛಿದ್ರಕಾರಿ ಶಕ್ತಿಗಳೊಡನೆ ಒಪ್ಪಂದ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಿದೆ. ತಮಿಳುನಾಡು, ಆಂಧ್ರ, ಕಾಶ್ಮೀರಗಳಲ್ಲಿ ಪ್ರಾದೇಶಿಕ ಪಕ್ಷಗಳೂ, ಕರ್ನಾಟಕದಲ್ಲಿ ಜನತಾ ಪಕ್ಷವೂ, ಪ. ಬಂಗಾಲ, ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನುಖಂಡತ್ವದ ಎಡರಂಗ ಸರಕಾರವೂ ಅಧಿಕಾರದಲ್ಲಿರುವುದನ್ನು ಕಾಣಬಹುದಾಗಿದೆ. ಆರ್ಥಿಕ ಮುಗ್ಗಟ್ಟಿನಲ್ಲಿರುವ ಇಂದಿರಾ ಸರಕಾರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಹಣ ಪಡೆಯುವ ಸಲುವಾಗಿ ದೇಶದ ಸಾರ್ವಭೌಮತ್ವವನ್ನೇ ಸವಾಲಾಗಿಟ್ಟಿರುವುದನ್ನೂ ಹೋದ ವರ್ಷ ನೋಡಿದ್ದೇವೆ.

ಕಾಂಗ್ರೆಸ್ಸಿನ ಅಳ್ಳಿಕೆಯಿಂದಾಗಿ ದೇಶದಲ್ಲಿ ಕಾರ್ಮೋಡ ಕವಿಯುತ್ತಿರುವಾಗ ಒಂದು ಆಶಾಕಿರಣವನ್ನೂ ನೋಡುತ್ತಿದ್ದೇವೆ. ಇಂದಿರಾ ಸರ್ವಾಧಿಕಾರದ ವಿರುದ್ಧವಾಗಿ ಪರ್ಯಾಯ ಶಕ್ತಿಯನ್ನು ಬೆಳೆಸಬೇಕೆಂಬ ಪಣತೊಟ್ಟು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ದುಡಿಯುತ್ತಿರುವುದನ್ನು ನೋಡುತ್ತಿದ್ದೇವೆ. ಅದರ ಪರಿಣಾಮವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟು ಕೂಡಿಸುವ ಪರಿಶ್ರಮದಲ್ಲಿ ಸಿ.ಪಿ.ಐ. (ಎಂ) ಪಕ್ಷಕ್ಕೆ ಯಶಸ್ಸು ಸಿಗುತ್ತಿರುವುದನ್ನು ನೋಡುತ್ತಿದ್ದೇವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದಲ್ಲಿರುವ ಎಡರಂಗ ಸರಕಾರ ಕಾಂಗ್ರೆಸ್ಸಿಗಿಂತಲೂ ಉತ್ತಮ ಆಡಳಿತೆಮಾಡಿ ತೋರಿಸಲು ಸಾಧ್ಯವಿದೆಯೆಂಬುದನ್ನು ಪ ಬಂಗಾಲ ಮತ್ತು ತ್ರಿಪುರಾ ಸರಕಾರಗಳು ತೋರಿಸಿಕೊಟ್ಟು ಎರಡನೇ ಸಲ ಅಧಿಕಾರಕ್ಕೆ ಬರಲು ಸಾಧ್ಯವಾಗಿರುವುದು ಜನತೆ ಕಾಣುತ್ತಿರುವ ಆಶಾಕಿರಣ. ಹಾಗೆಯೇ ಕರ್ನಾಟಕ–ಆಂಧ್ರಗಳಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಿರುವುದು ಮತ್ತೊಂದು ಮುನ್ನಡೆಯ ಹೆಜ್ಜೆ.

ಇದರ ಜೊತೆಯಲ್ಲೇ ಎಲ್ಲ ವಿರೋಧ ಪಕ್ಷಗಳ ಕಾರ್ಮಿಕ ಸಂಘಟನೆಗಳು ಒಂದಾಗಿ ಹೋರಾಡುತ್ತಿರುವುದರಿಂದಲೇ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ನೌಕರರ ಬೇಡಿಕೆಗಳ ಇತ್ಯರ್ಥಕ್ಕೆ ಕೇಂದ್ರ ಸರಕಾರ ಮುಂದೆ ಬಂದಿರುವುದಕ್ಕೆ ಮುಖ್ಯ ಕಾರಣ.

ಒಂದೆಡೆ ಇಂದಿರಾ ಕಾಂಗ್ರೆಸ್ಸಿನ ಪ್ರಭಾವ ಕುಸಿಯುತ್ತಿರುವಂತೆಯೇ ಮತ್ತೊಂದೆಡೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲ ಒಟ್ಟು ಕೂಡಿ ಕಾಂಗ್ರೆಸ್ಸಿಗೆ ವಿರುದ್ಧವಾಗಿ ಪರ್ಯಾಯ ಪಕ್ಷಕಟ್ಟಲು ಮುಂದಾಗಿರುವುದು ಸ್ವಾಗತಾರ್ಹ. ಇದರ ಜೊತೆಯಲ್ಲೇ ಸಾಮೂಹಿಕ ಸಂಘಟನೆಗಳಾದ, ರೈತ-ಕಾರ್ಮಿಕ ಸಂಘಟನೆಗಳು ಭಿನ್ನಾಭಿಪ್ರಾಯಗಳನ್ನು ಬದಿಗಿತ್ತು ಐಕ್ಯ ಹೋರಾಟ ನಡೆಸುತ್ತಿರುವುದು ಅಭಿನಂದನೀಯ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಎಡ ಮತ್ತು ಪ್ರಜಾಪ್ರಭುತ್ವರಂಗ ಮಾತ್ರ ಇಂದಿರಾ ಕಾಂಗ್ರೆಸ್ಸಿಗೆ ಪರ್ಯಾಯವಾಗಲು ಸಾಧ್ಯ. ಈ ರಂಗವನ್ನು ಬಲಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯ.

●

ಎಸ್. ಎಫ್. ಐ. ಚಟುವಟಿಕೆಗಳು

ಕುಂದಾಪುರ :

ಎಸ್.ಎಫ್.ಐ.ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳು

ತಾರೀಕು 25-1-1983 ರಂದು ಟೌನ್ ಸಮಿತಿ ಆಶ್ರಯದಲ್ಲಿ "ಜಾತ್ಯತೀತತೆ" ವಿಷಯವಾಗಿ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು. ನ್ಯಾಯವಾದಿಗಳಾದ ರಾಧಾಕೃಷ್ಣ ಕಾರಂತರು ಉಪನ್ಯಾಸ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ. ರಾಜೇಂದ್ರ ಉಡುಪರು ವಹಿಸಿದ್ದರು. ಟೌನ್ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ ಸ್ವಾಗತಿಸಿದರು. ಕೋಟಾ ನಾಗರಾಜ ವಂದಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ಸ್ಪರ್ಧೆಗಳು : 12ನೇ ವಾರ್ಷಿಕೋತ್ಸವದ ಅಂಗವಾಗಿ ಬಸ್ರೂರಿನ ಶಾರದಾ ಕಾಲೇಜು ಎಸ್.ಎಫ್.ಐ. ಸಮಿತಿಯು ಕಬಡ್ಡಿ ಪಂದ್ಯಾಟವನ್ನು ನಡೆಸಿತು. ಬಸ್ರೂರಿನ ಆಸುಪಾಸಿನ ಗ್ರಾಮಗಳವರಿಗೆ ಈ ಪಂದ್ಯವನ್ನು ನಡೆಸಲಾಯಿತು.

ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆಯನ್ನೂ ಪಿ. ಯು. ಸಿ. ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನ ಸ್ಪರ್ಧೆಯನ್ನೂ ನಡೆಸಲಾಗಿದೆ.

ವಿಜೇತ ಕಾರ್ಯಕರ್ತರು : ಭಂಡಾರ್ಕಾರ್ಸ್ ಕಾಲೇಜಿನ "ಕಾಲೇಜ್ ಡೇ" ಅಂಗವಾಗಿ ನಡೆದ ಹಿಂದಿ ಭಾಷಣ ಸ್ಪರ್ಧೆಯಲ್ಲಿ ಎಸ್.ಎಫ್.ಐ. ಕಾರ್ಯಕರ್ತರಾದ ಕೋಟಾ ನಾಗರಾಜ ಪ್ರಥಮ ಬಹುಮಾನವನ್ನೂ, ಕೆ. ವಿಶ್ವನಾಥ ದ್ವಿತೀಯ ಬಹುಮಾನವನ್ನೂ ಗಳಿಸಿದ್ದಾರೆ. ಭಾಷಣದ ವಿಷಯ "ಜನತಂತ್ರ ಕ್ಯಾ ಹೈ" (ಪ್ರಜಾಪ್ರಭುತ್ವ ಅಂದರೇನು ?) "ಹೃದಯವನ್ನು ಬೆಸೆಯಬಲ್ಲ ಭಾಷೆ ಒಡೆಯುತ್ತಿದೆಯೆ" ಎಂಬ ಪ್ರಬಂಧ ಸ್ಪರ್ಧೆಯಲ್ಲಿ ಕೋಟಾ ನಾಗರಾಜ ಪ್ರಥಮ ಬಹುಮಾನ ಗಳಿಸಿದ್ದಾರೆ.

○

ಹರಪನಹಳ್ಳಿ :

ಎಸ್.ಎಫ್.ಐ. ಸಮಿತಿಯ ಪುನರ್ರಚನೆ

1982–83ನೇ ಸಾಲಿನ ಹರಪನಹಳ್ಳಿ ಎಸ್. ಎಫ್. ಐ. ಘಟಕದ ಕಾರ್ಯಕಾರಿ ಸಮಿತಿಯನ್ನು ಪುನಃ ರಚಿಸಲಾಯಿತು. ದಿನಾಂಕ 23-1-83 ರಂದು ಭಾನುವಾರ ಸಾಯಂಕಾಲ ಎಸ್.ಎಫ್.ಐ. ಆಫೀಸಿನಲ್ಲಿ ಸಭೆ ಕರೆದು ಸರ್ವಾನುಮತದಿಂದ ಈ ಕೆಳಗಿನ ಸಮಿತಿಯನ್ನು ರಚಿಸಲಾಗಿದೆ.

ಅಧ್ಯಕ್ಷರಾಗಿ ಕಾಂ. ಕೃಷ್ಣಾಜಿ ಕಲಾಲ, ಉಪಾಧ್ಯಕ್ಷರುಗಳಾಗಿ ಕಾಂ. ಹೆಚ್. ಕೆ. ಕುಬೇರ್‌ಗೌಡ, ಕಾಂ. ಎಂ. ಹೆಚ್. ಕರಿಬಸಪ್ಪ, ಕಾಂ. ಎಂ. ದಿವಾಕರ್. ಪ್ರಧಾನ ಕಾರ್ಯದರ್ಶಿಗಳಾಗಿ ಕಾಂ. ಇಸ್ಮಾಯಿಲ್ ಸಾಹೇಬ್ ಕಾಂ. ಎ. ದೇವಪ್ಪ, ಕಾಂ. ರಾಮನಾಯ್ಕ. ಖಜಾಂಚಿಯಾಗಿ ಕಾಂ. ಎನ್. ರಾಜ ಸಾಹೇಬ್.

ಹಾಗೂ 9 ಜನರನ್ನು ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಲಾಯಿತು. ಕಾರ್ಯಕಾರಿ ಸಮಿತಿ ಒಟ್ಟು 17 ಜನ ಸದಸ್ಯರನ್ನೊಳಗೊಂಡಿದೆ

(8ನೇ ಪುಟನೋಡಿ)

ದೇಶದ ರಕ್ಷಣೆಗೆ ಕಾರ್ಮಿಕರು ಮುಂದಾಗಿರಿ

(1ನೇ ಪುಟದಿಂದ)

ದಾರಿ ಕಾಣದೆ, ಅಮೇರಿಕದ ಸಾಮ್ರಾಜ್ಯಶಾಹಿಗಳು ಯುದ್ಧ ತಯಾರಿ ನಡೆಸಿದ್ದಾರೆ.

ಸಮತಾವಾದಿ ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟಿಲ್ಲ. ಅಲ್ಲಿ ಕಾರ್ಖಾನೆಗಳೆಲ್ಲ ಸಮಾಜದ ಸೊತ್ತಾಗಿರುತ್ತವೆ, ಆದ್ದರಿಂದ ನಿರುದ್ಯೋಗ ಸಮಸ್ಯೆ ಉಂಟಾಗುವುದಿಲ್ಲ. ಈಗ ಸಮತಾವಾದವು ಕನಸಾಗಿ ಉಳಿದಿರುವುದಿಲ್ಲ. ಅದು ನಿಜ ಸಂಗತಿಯಾಗಿದೆ, ವಾಸ್ತವವಾಗಿದೆ.

ಸಮತಾವಾದವನ್ನೂ, ಸಮತಾವಾದಿ ದೇಶಗಳನ್ನೂ ನಾಶಮಾಡುವ ದುರುದ್ದೇಶದಿಂದ ಸಾಮ್ರಾಜ್ಯಶಾಹಿಗಳು ಯುದ್ಧ ತಯಾರಿ ಮಾಡುತ್ತಿದ್ದಾರೆ. ನಾವು ಯುದ್ಧವನ್ನು ವಿರೋಧಿಸುತ್ತೇವೆ, ಸಾಮ್ರಾಜ್ಯಶಾಹಿಗಳ ಯುದ್ಧದ ವಿರುದ್ಧ ಹೋರಾಡುತ್ತೇವೆ ಎಂದು ನಾವು ಎಚ್ಚರಿಕೆ ಕೊಡಬೇಕು. ಜನತೆಯ ಬಲ ಹೆಚ್ಚಾಗಿದೆ. ವಿಯಟ್‌ನಾಮಿನ ಜನತೆ ಅಮೇರಿಕದ ಸಾಮ್ರಾಜ್ಯಶಾಹಿಗಳನ್ನು ಹೊಡೆದೋಡಿಸಿದ್ದಾರೆ. ಹಾಗೆಯೇ ಭಾರತದ ಕ್ರಾಂತಿಕಾರಿ ಕಾರ್ಮಿಕವರ್ಗ, ಅಮೇರಿಕದ ಸಾಮ್ರಾಜ್ಯಶಾಹಿಯ ಯುದ್ಧ ನೀತಿಯನ್ನು ವಿರೋಧಿಸುತ್ತದೆ, ಯುದ್ಧ ಹೂಡಿದರೆ ಅದನ್ನು ಸೋಲಿಸುತ್ತದೆ ಎಂದು ಕಾಂ. ರಾಮಮೂರ್ತಿಯವರು ಹೇಳಿದರು.

ಸಿ.ಐ.ಟಿ.ಯು. ಉಪಾಧ್ಯಕ್ಷರಲ್ಲೊಬ್ಬರಾದ ಕಾಂ. ಬಾಲಾನಂದನ್ ಅವರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಕಳೆದ 35 ವರ್ಷಗಳಿಂದ ಆಡಳಿತೆ ನಡೆಸುತ್ತಿದ್ದರೂ, ಯೋಜನೆಗಳನ್ನು ಮಾಡುತ್ತಿದ್ದರೂ ಕೂಡ, ದೇಶದ ಮೂಲೆ ಮೂಲೆಯಲ್ಲಿ ಪ್ರತಿ ವರ್ಷ ಬರಗಾಲ ಮತ್ತು ನೆರೆ ಹಾವಳಿಯ ದಾರುಣ ಚಿತ್ರ ನೋಡುತ್ತಿದ್ದೇವೆ. ನಮ್ಮ ದೇಶದಲ್ಲಿ ಯಾವುದೇ ಯೋಜನೆಯೇ ಇಲ್ಲವೆಂದು ಇದರರ್ಥವಾಗುತ್ತದೆ.

ಪ. ಬಂಗಾಲ ಸರಕಾರ ನೆರೆ ಹಾವಳಿ ಮತ್ತು ಬರಗಾಲದಿಂದ ಪೀಡಿತವಾದಾಗ ಕೇಂದ್ರ ಸರಕಾರ ಸಹಾಯಕ್ಕೆ ಬರಲಿಲ್ಲ. ಯೋಜನೆಯ ವಿಫಲತೆಯನ್ನು ಇದು ತೋರಿಸುತ್ತದೆ.

1982ನೇ ವರ್ಷವನ್ನು ಉತ್ಪಾದನೆಯ ವರ್ಷವೆಂದು ಇಂದಿರಾ ಗಾಂಧಿ ಸಾರಿದ್ದರು. ಮುಂಬಯಿಯಲ್ಲಿ ಎರಡೂವರೆ ಲಕ್ಷ ಬಟ್ಟೆ ಗಿರಣಿ ಕೆಲಸಗಾರರು ಒಂದು ವರ್ಷದಿಂದ ಮುಷ್ಕರದಲ್ಲಿದ್ದಾರೆ. ಬಟ್ಟೆ ಗಿರಣಿಗಳಲ್ಲಿ ಬಿಕ್ಕಟ್ಟು, ಇಂಜನಿಯರಿಂಗ್ ಕಾರ್ಖಾನೆಗಳಲ್ಲಿ ಬಿಕ್ಕಟ್ಟು. ಹೀಗೆ ಎಲ್ಲ ಮೂಲ ಕೈಗಾರಿಕೆಗಳು ಬಿಕ್ಕಟ್ಟನ್ನೆದುರಿಸುತ್ತಿವೆ ಉತ್ಪಾದನಾ ವರ್ಷದಲ್ಲಿ.

ಎರಡು ವರ್ಷಗಳ ಹಿಂದೆ ಲಾರಿಗಳು ಸಿಗುತ್ತಿರಲಿಲ್ಲ, ಈಗ ನೀವು ಬೇಡದೆ, ಮುಂಗಡ ಹಣ ಕೊಡದೆ ಲಾರಿಗಳು ನಿಮ್ಮ ಅಂಗಡಿ ಮುಂದೆ ಬಂದು ನಿಲ್ಲಿಸಲಾಗುತ್ತದೆ. ನಮ್ಮ ದೇಶದ ಕೈಗಾರಿಕೆಗಳು ಬಿಕ್ಕಟ್ಟನ್ನೆದುರಿಸುತ್ತಿರುವಾಗ, ಕೇಂದ್ರ ಸರಕಾರ ವಿದೇಶದಿಂದ ವಸ್ತುಗಳನ್ನು ಆಮದು ಮಾಡುತ್ತಿದೆ. ಇದರಿಂದ ಕಾರ್ಖಾನೆಗಳಿಗೆ ಹೆಚ್ಚು ಪೆಟ್ಟು ಬೀಳುತ್ತಿದೆ. ಈ ಕಾರಣದಿಂದಲೇ ಇಂದಿರಾ ಸರಕಾರ ಸರಿಯಾದ ಯೋಜನೆ ಇಲ್ಲದ ಸರಕಾರವೆಂದು ನಾವು ಹೇಳುತ್ತಿದ್ದೇವೆ.

ಸಾಮ್ರಾಜ್ಯಶಾಹಿಗಳ-ಬಂಡವಾಳಶಾಹಿಗಳ ಆಯಕಟ್ಟಿನಲ್ಲಿ ಇಂಥ ಸಮಸ್ಯೆಗಳಿಗೆ ಪರಿಹಾರವಿಲ್ಲೆಂದು ಸಿ ಐ ಟಿ. ಯು. ಮನಗಂಡಿದೆ. ಆದ್ದರಿಂದ ಇಂಥ ನೀತಿಯ ವಿರುದ್ಧ ಹೋರಾಡಬೇಕು. ಸಂಘಟಿತ ಕಾರ್ಮಿಕ ವರ್ಗದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಉಂಟು ಮಾಡಲು ಸಾಧ್ಯ. ಆದ್ದರಿಂದ ಜನತೆ, ಕಾರ್ಮಿಕರು, ರೈತರೆಲ್ಲ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಿಕೊಡಲೂ, ಹಾಗೆಯೇ ಇಡೀ ಸಮಾಜವನ್ನೇ ಪರಿವರ್ತಿಸಲು ಕಾರ್ಮಿಕರು ಶ್ರಮಿಸುವುದು ಅತ್ಯಗತ್ಯ ಎಂದು ಹೇಳಿದರು.

ವರದಿ : ಎನ್. ಕೆ. ಉಪಾಧ್ಯಾಯ

○

(7ನೇ ಪುಟದಿಂದ)

ರಾಯಚೂರು :

ಮುದಗಲ್ಲು ಎಸ್.ಎಫ್.ಐ. ಆಶ್ರಯದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು

ರಾಯಚೂರು ಜಿಲ್ಲೆಯ ಮುದಗಲ್ಲಿನಲ್ಲಿ ಎಸ್. ಎಫ್. ಐ. ಮುದಗಲ್ಲ ಘಟಕವು ವಿದ್ಯಾರ್ಥಿಗಳಿಗಾಗಿ ವಿವಿಧ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿತ್ತು. ಈ ಸ್ಪರ್ಧೆಗಳಲ್ಲಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲು ನಿರ್ಧರಿಸಿ, ಬಹುಮಾನ ವಿತರಣಾ ಸಮಾರಂಭವನ್ನು ದಿನಾಂಕ 26-1-83 ರಂದು ಏರ್ಪಡಿಸಲಾಗಿತ್ತು. ಈ ಸಮಾರಂಭಕ್ಕೆ ಮುಖ್ಯ ಭಾಷಣಕಾರರಾಗಿ ಶ್ರೀ ಆರ್. ಕೆ. ಹುಡಗಿ ಉಪನ್ಯಾಸಕರು, ಇಂಜೀನಿಯರಿಂಗ್ ಕಾಲೇಜ್ ಗುಲ್ಬರ್ಗಾ ಇವರು ಭಾಗವಹಿಸಿ ಪ್ರಜಾಸತ್ತೆಗ ಮಾರಕವಾದ ಕಂದಾಚಾರ, ಮೂಢನಂಬಿಕೆ, ವ್ಯಕ್ತಿ ಪೂಜೆ ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ ಮುಂತಾದ ಅಂಶಗಳನ್ನು ತಿರಸ್ಕರಿಸಲು ಕರೆ ಕೊಟ್ಟರು. ಎಸ್. ಎಫ್. ಐ. ಧ್ಯೇಯೋದ್ದೇಶಗಳನ್ನು ಕುರಿತು ಜಿಲ್ಲಾ ಸಮಿತಿ ಖಜಾಂಚಿ ಕಾಂ। ಮಂಜುಳಾ ಸಭೆಯಲ್ಲಿ ಮಾತನಾಡಿದರು.

ಕಾರ್ಯಕ್ರಮವು ಸಿಂಧನೂರು ಸಮುದಾಯ ಸಂಘಟನಕಾರರಾದ ಕಾಂ। ಸಿ. ಜಿ. ಹಿರೇಮಠ, ಕಾಂ। ಲಕ್ಷ್ಮಣ ಮತ್ತು ಕಾಂ। ಜಿ ಎಸ್. ಹಿಟ್ನಳ್ಳಿ ಇವರು ಹಾಡಿದ ಕ್ರಾಂತಿ ಗೀತೆಗಳೊಂದಿಗೆ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಡಾ॥ ಎಸ್. ಬಿ. ಭಮಸಾಗರಅವರು ಜಯಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯನ್ನು ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಿ ರಾಮಪ್ಪ, ಪ್ರಾಚಾರ್ಯರು, ವಹಿಸಿಕೊಂಡಿದ್ದರು. ಪ್ರಾರಂಭದಲ್ಲಿ ಕಾಂ' ಅನಿಲಕುಮಾರ ಸ್ವಾಗತ ಭಾಷಣ ಮಾಡಿದರು. ಸಮಾರಂಭದ ಕೊನೆಯಲ್ಲಿ ಕಾಂ। ಎಂ. ರಮೇಶ್ ವಂದನಾರ್ಪಣೆ ಕೋರಿದರು.

ಇದಕ್ಕೂ ಮುಂಚೆ ದಿನಾಂಕ 21 ಮತ್ತು 22 ಜನವರಿಯಂದು 'ನಮಗೆಂಥ ಸಾಹಿತ್ಯಬೇಕು ?' ಎಂಬ ವಿಷಯವನ್ನು ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣದ ಮೊದಲ ದಿನ ವಕೀಲರಾದ ಕಾಂ। ಶರಣಪ್ಪ ನಾಗಲಾಪುರ ಮತ್ತು ಶ್ರೀ ಮಲ್ಲಿಕಾರ್ಜುನಪ್ಪ ಇವರು ತಮ್ಮ ವಿಚಾರವನ್ನು ಮಂಡಿಸಿದರು. ಎರಡನೆಯ ದಿನ, ಶ್ರೀ ಜಿ. ಬಿ. ಬಿಜಾಪುರೆ ಮತ್ತು ಎಸ್. ಜಿ ಕೋಟಿ ಇವರು ತಮ್ಮ ವಿಚಾರವನ್ನು ಮಂಡಿಸಿದರು.

ಏಜೆನ್ಸಿದಾರರ ಗಮನಕ್ಕೆ

ಏಜೆನ್ಸಿದಾರರು ತಮ್ಮ ಏಜೆನ್ಸಿ ಹಣವನ್ನು ಇನ್ನು ಮುಂದೆ ಡಿ. ಡಿ ಅಥವ ಮನಿ ಆರ್ಡರ್ಸ್ ಮೂಲಕ 'ಸಂಪಾದಕರು ಐಕ್ಯರಂಗ' ಹೆಸರಿಗೆ ಕಳುಹಿಸಬೇಕು. ಮೈಲ್ ಟ್ರಾನ್ಸ್‌ಫರ್ ಮಾಡುವುದರಿಂದ ಅನಾನುಕೂಲ ಆಗುತ್ತಿರುವುದರಿಂದ ಏಜೆನ್ಸಿದಾರರು ಮೈಲ್ ಟ್ರಾನ್ಸ್‌ಫರ್ ಮೂಲಕ ಹಣ ಪಾವತಿ ಮಾಡಬಾರದೆಂದು ಕೋರುತ್ತೇವೆ.

ಕೆಲವರ ಏಜೆನ್ಸಿ ಹಣ ಮೂರು-ನಾಲ್ಕು ತಿಂಗಳುಗಳಿಂದ ಬಾಕಿ ಉಳಿದಿದೆ. ಅದನ್ನು ಕೂಡಲೇ ಪಾವತಿ ಮಾಡಬೇಕೆಂದು ಹಲವು ಬಾರಿ ಕೇಳಿಕೊಳ್ಳಲಾಗಿದ್ದರೂ ಸಹ ಹಣವನ್ನು ತಲುಪಿಸಿಲ್ಲ. ಏಜೆನ್ಸಿ ಹಣವನ್ನು ಕೂಡಲೇ ಪಾವತಿ ಮಾಡದಿದ್ದಲ್ಲಿ ಪತ್ರಿಕೆ ಕಳಿಸುವುದನ್ನು ನಿಲ್ಲಿಸಬೇಕಾಗುತ್ತದೆ.

ವ್ಯವಸ್ಥಾಪಕ

ಚಂದಾದಾರರಾಗಬಯಸುವವರಿಗೆ ಸೂಚನೆ

'ಐಕ್ಯರಂಗ'ಕ್ಕೆ ಚಂದಾದಾರರಾಗಬಯಸುವವರು ಕನಿಷ್ಠ ಅರ್ಧ ವಾರ್ಷಿಕ ಚಂದಾ ಕಳುಹಿಸಬೇಕು. ಅರ್ಧ ವರ್ಷದ ಚಂದಾ ದರ 15 ರೂಪಾಯಿಗಳು, ವಾರ್ಷಿಕ ಚಂದಾ 30 ರೂಪಾಯಿಗಳು.

ಚಂದಾ ಹಣವನ್ನು 'ಸಂಪಾದಕರು, ಐಕ್ಯರಂಗ' ಹೆಸರಿಗೆ ಮಾತ್ರ ಕಳುಹಿಸಬೇಕು.

ವ್ಯವಸ್ಥಾಪಕ

ಪ್ರಾಂತ ರೈತ ಸಂಘದ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯಕಾರಿ ಸಮಿತಿಯು, ಉತ್ತರ ಕರ್ನಾಟಕದ ಪ್ರಾದೇಶಿಕ ವಿಭಾಗದ ಸಭೆಯನ್ನು ದಿನಾಂಕ 14—2—83 ರಂದು ರಾಯಚೂರಿನಲ್ಲಿ ಕರೆಯಲಾಗಿದೆ. ಈ ಪ್ರದೇಶದ ಕಾರ್ಯಕಾರಿ ಸಮಿತಿ ಸದಸ್ಯರಲ್ಲದೆ, ಈ ಪ್ರದೇಶದ ಜಿಲ್ಲಾ ಸಮಿತಿ ಪದಾಧಿಕಾರಿಗಳನ್ನು ಆಮಂತ್ರಿಸಲು ತೀರ್ಮಾನಿಸಲಾಗಿದೆ

ಅಲ್ಲದೆ 15-2-83 ರಂದು ಬರಗಾಲ ಪೀಡಿತ ಪ್ರದೇಶ ಪರಿಹಾರ ಸಮಿತಿಯ ಸಭೆಯನ್ನು ಅಲ್ಲೇ ಕರೆಯಲಾಗಿದ್ದು, ಸಂಬಂಧಪಟ್ಟ ಎಲ್ಲಾ ಸಂಗಾತಿಗಳು ಸಭೆಗೆ ತಪ್ಪದೆ ಬರಬೇಕಾಗಿ ವಿನಂತಿ. ಈ ಸಭೆಗೆ ಕಾಂ. ಟಿ. ರಾಮಚಂದ್ರರಾವ್ ಬರುತ್ತಿದ್ದಾರೆ.

ವಿಳಾಸ :

ಚಂದ್ರಶೇಖರ ಬಾಳಿ
ರೈತ ಸಂಘದ ಕಾರ್ಯಾಲಯ
ಹಳೇ ದವಾಖಾನೆ
ರಾಯಚೂರು

ವಿ. ಎನ್. ಹಳಕಟ್ಟಿ
ಪ್ರ. ಕಾರ್ಯದರ್ಶಿ

ಸಂಪಾದಕೀಯ

(1ನೇ ಪುಟದಿಂದ)

ನೀಡಿದ್ದಾರೆ. ಇದು ಮಾತ್ರವಲ್ಲದೆ ಸರ್ಕಾರದಿಂದ ಸಹಾಯ ಧನ ಪಡೆಯುತ್ತಿರುವ ಖಾಸಗೀ ವಿದ್ಯಾ ಸಂಸ್ಥೆಗಳನ್ನು ರಾಷ್ಟ್ರೀಕರಿಸಿ ಸರ್ಕಾರವೇ ವಹಿಸಿಕೊಳ್ಳುವುದಾಗಿ ಸಹ ತಿಳಿಸಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಬಗ್ಗೆ ಶಾಸಕರ ಬೆಂಬಲ ಕೋರಿದ್ದಾರೆ.

ಜನತಾರಂಗ ಸರ್ಕಾರವು ಕ್ಯಾಪಿಟೇಶನ್ ಶುಲ್ಕವನ್ನು ರದ್ದುಗೊಳಿಸಿ, ಖಾಸಗೀ ವಿದ್ಯಾ ಸಂಸ್ಥೆಗಳನ್ನು ರಾಷ್ಟ್ರೀಕರಿಸಿ ಶಿಕ್ಷಣದ ವ್ಯಾಪಾರಕ್ಕೆ ಪೂರ್ಣ ವಿರಾಮ ಹಾಕಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಒತ್ತಾಯಿಸುತ್ತದೆ. ಶಿಕ್ಷಣ ಮಂತ್ರಿಗಳು, ತಮ್ಮ ಭರವಸೆಗಳನ್ನು ಕಾರ್ಯಗತಗೊಳಿಸಿ ಬಹುದಿನಗಳಿಂದ ಕರ್ನಾಟಕದ ಜನತೆ ನಿರೀಕ್ಷಿಸಿದ್ದ ಬೇಡಿಕೆಯನ್ನು ಈಡೇರಿಸಬೇಕಾಗಿದೆ. ಈ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತರಲು ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು, ಅಧ್ಯಾಪಕರು ಮತ್ತು ಜನತೆ ಶ್ರಮಿಸಬೇಕಾಗಿದೆ. ಎಲ್ಲಾ ಶಾಸಕರು ಸರ್ಕಾರದ ಈ ಪ್ರಯತ್ನಕ್ಕೆ ಸಂಪೂರ್ಣ ಬೆಂಬಲ ನೀಡಲೇಬೇಕಾಗಿದೆ. ಇಲ್ಲವಾದಲ್ಲಿ ಎಚ್ಚೆತ್ತ ಜನತೆ ಮತ್ತು ಮತದಾರರು ಅಂತಹ ಶಾಸಕರ ರಾಜೀನಾಮೆಗೆ ಒತ್ತಾಯಿಸಿ ಚಳವಳಿ ನಡೆಸಬೇಕಾದೀತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street, Sultanpet, B-560 053. Phone-24154, Prited at Ravee Traders, No. 8/1, J.M. Lane, Balepet Cross, Bangalore-560 053, EDITOR P. RAMACHANDRA RAO